ಸೆಪ್ಟೆಂಬರ್ ೨೦೨೫

# ಆರ್ಬಿಟ್,ಹುಮನಾಬಾದ

ಸಮಾಜ ಸೇವಾ ಸಂಸ್ಥೆ, ಎನ್.ಎಚ್. ೬೫ ರೈಲ್ವೇ
ನಿಲ್ದಾಣದ ಹತ್ತಿರ ಹುಮ್ನಾಬಾದ ತಾಲೂಕು,
ಬೀದರ್ ಜಿಲ್ಲೆ, ಕರ್ನಾಟಕ, 585330

# ಸೇವಾ ಸಂಗಮ ಸಂಸ್ಥೆ, ಕಲಬುರಗಿ

ಸಮಾಜ ಸೇವಾ ಸಂಸ್ಥೆ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ
ಕೇಂದ್ರೀಯ ವಿದ್ಯಾಲಯ ಹತ್ತಿರ, ಕೋಟ್ನೂರ (ಡಿ) ಜೇವರ್ಗಿ ರಸ್ತೆ ಕಲಬುರಗಿ

# ಸೇವಾವಾಣಿ

## ಸಮಾಜದ ಹಿತಕ್ಕೆ ಸಮರ್ಪಿತ ಸೇವೆ





ಡಾ॥ ರಾಬರ್ಟ್ ಮೈಕಲ್ ಮಿರಂದ
ಧರ್ಮಾಧ್ಯಕ್ಷರು, ಹಾಗೂ ಅಧ್ಯಕ್ಷರು
ಆರ್ಬಿಟ್ ಮತ್ತು ಸೇವಾ ಸಂಗಮ ಸಂಸ್ಥೆ



ವಂ. ಫಾ॥ ವಿಕ್ಟರ್ ವಾಸ್
ನಿರ್ದೇಶಕರು, ಆರ್ಬಿಟ್ ಮತ್ತು
ಸೇವಾ ಸಂಗಮ ಸಂಸ್ಥೆ

### “ಆರ್ಬಿಟ್ ಸಂಸ್ಥೆ ಹುಮ್ನಾಬಾದ್‌ನಲ್ಲಿ ಜಿಲ್ಲಾ ಒಕ್ಕೂಟ ಬಲವರ್ಧನೆ ತರಬೇತಿ”

29 ಆಗಸ್ಟ್ 2025ರಂದು ಆರ್ಬಿಟ್ ಸಂಸ್ಥೆ ಹುಮ್ನಾಬಾದ್‌ನಲ್ಲಿ ಜಿಲ್ಲಾ ಒಕ್ಕೂಟ ಬಲವರ್ಧನೆ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಶ್ರೀಯುತ ಎಮ್.ಡಿ ಹರಳಪ್ಪ ಬಳ್ಳಾರಿ ಸಂಸ್ಥೆಯ ಮಹಿಳಾ ಸಬಲೀಕರಣ ಯೋಜನೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದರು. ಸಭೆಯಲ್ಲಿ ಉಪಸ್ಥಿತರಿದ್ದ ಫಾದರ್ ಅಲ್ಬರ್ಟ್ ಸಹ ನಿರ್ದೇಶಕರು ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಇವರು ಮಾತನಾಡುತ್ತಾ ಜಿಲ್ಲಾ ಒಕ್ಕೂಟ ಎನ್ನುವುದು ಒಂದು ಒಗ್ಗಟ್ಟಿನ ಸಂಕೇತ ಸದಸ್ಯರೆಲ್ಲರೂ ಸಮುದಾಯದ ಅಭಿವೃದ್ಧಿಗಾಗಿ ದುಡಿಯುವವರಾಗಿ ಹೊರಹೊಮ್ಮ ಬೇಕೆಂದು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಶುಭ ಹಾರೈಸಿದರು. ಮುಂದುವರೆದಂತೆ ಸಂಪನ್ಮೂಲ ವ್ಯಕ್ತಿಗಳು ಜಿಲ್ಲಾ ಒಕ್ಕೂಟ ಎಂದರೇನು? ಅದು ಹೇಗೆ ರಚನೆಯಾಗುತ್ತದೆ ಮತ್ತು ಪದಾಧಿಕಾರಿಗಳ ಜವಾಬ್ದಾರಿಗಳೇನು? ಹಾಗೂ ಜಿಲ್ಲಾ ಒಕ್ಕೂಟದ ಕಾರ್ಯವೈಖರಿಯ ಬಗ್ಗೆ ಸವಿಸ್ತಾರವಾದ ಮಾಹಿತಿಯನ್ನು ನೀಡಿದರು. ಮೂರು ಗುಂಪುಗಳನ್ನಾಗಿ ವಿಂಗಡನೆ ಮಾಡಿ ಕೆಲವು ಪ್ರಶ್ನಾವಳಿಗಳನ್ನು ನೀಡುವುದರ ಮೂಲಕ ಉತ್ತರವನ್ನು ಬರೆಯಲು ನೀಡಿದರು. ಮಹಿಳೆಯರು ಸಕ್ರಿಯವಾಗಿ ಭಾಗವಹಿಸಿ ಚಟುವಟಿಕೆಯಲ್ಲಿ ಜಿಲ್ಲಾ ಒಕ್ಕೂಟದ ಮಾಹಿತಿಯನ್ನು ವಿವರಿಸಿದರು. ಈ ತರಬೇತಿಯಲ್ಲಿ 36 ಮಹಿಳೆಯರು ಹಾಗೂ ಮಹಿಳಾ ಸಬಲೀಕರಣ ಯೋಜನೆಯ ಸಿಬ್ಬಂದಿ ವರ್ಗದವರು ಭಾಗವಹಿಸಿ ಜಿಲ್ಲಾ ಒಕ್ಕೂಟ ಬಲವರ್ಧನೆಗೆ ಕುರಿತು ತಿಳಿದುಕೊಂಡರು. ಜನಜಾಗೃತಿ ತಾಲೂಕ ಒಕ್ಕೂಟದವರು ಸ್ವಾಗತಿಸಿದರು ಜನ ಶಕ್ತಿ ಪ್ರಾರ್ಥಿಸಿದರು ಗಿಡಕ್ಕೆ ನೀರು ಹಾಕುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ಒಕ್ಕೂಟದವರು ಶ್ರೀಮತಿ ನಿರ್ಮಲ ರವರು ನಿರೂಪಿಸಿದರು ತಾವರೆ ಮಹಾಸಂಗದವರು ಧನ್ಯವಾದಗಳು ಸಲ್ಲಿಸಿದರು.







ಮಾನವೀಯತೆಯ ಸೇವೆ,
ಉತ್ತಮ ನಾಳೆಯ ನಿರ್ಮಾಣ.

# “ನವಜೀವನ (ಎ.ಪಿ.ಎಫ್) ಕಾರ್ಯಕ್ರಮ”

## “ಗ್ರಾಮ ಪಂಚಾಯತಿಯಲ್ಲಿ ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮ”



ದಿನಾಂಕ 04/08/2025 ರಂದು ಹುಮ್ನಾಬಾದ್ ತಾಲೂಕಿನ ಕನಕಟ್ಟಾ ಗ್ರಾಮ ಪಂಚಾಯತಿಯಲ್ಲಿ ಮಾನಸಿಕ ಅಸ್ವಸ್ಥರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತಿ ಶ್ರೀ ಪ್ರಭುಲಿಂಗ PDO, ಅಧ್ಯಕ್ಷರು, ಆಶಾ ಕಾರ್ಯಕರ್ತಿಯರು, ಬಿಲ್ ಕಲೆಕ್ಟರ್, ಉಪಸ್ಥಿತರಿದ್ದರು. ಈ ಮಾನಸಿಕ ಅಸ್ವಸ್ಥರ ಕಾರ್ಯಕ್ರಮವು ಅಜೀಮ್ ಪ್ರೇಮಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದ ಆರ್ಬಿಟ್ ಸಂಸ್ಥೆಯ ಹುಮ್ನಾಬಾದ್, ನವಜೀವನ ಕಾರ್ಯಕ್ರಮದ ಆಪ್ತ ಸಮಾಲೋಚಕರಾದ ಶ್ರೀ ರವಿ ಕಾರ್ಯಕರ್ತೆಯಾದ ಶ್ರೀಮತಿ ಮಾಹಾದೇವಿ ನವಜೀವನ ಭಾಗವಹಿಸಿದ್ದರು. ಮಾನಸಿಕ ಅಸ್ವಸ್ಥರ ಲಕ್ಷಣಗಳು ತಿಳಿಸಲಾಯಿತು, ಸ್ಕಿಜೋಫ್ರಿನಿಯಾ: ಕಾರಣವಿಲ್ಲದೆ ನಗುವುದು, ಅಳುವುದು, ಭಾವನೆ ಇಲ್ಲದೆ ಇರುವುದು ಗೀಳು ಮನೋರೋಗ: ಒಂದೇ ತರದ ವಿಚಾರಗಳು ಅನುಮಾನ ಪದೇ ಪದೇ ಮನಸ್ಸಿನಲ್ಲಿ ವಿಚಾರ ಮಾಡುವುದು, ಬೈಯೋದು, ಹೊಡಿಯೋದು, ಕೆಟ್ಟಕೆಟ್ಟ ಮಾತುಗಳು ಆಡುವುದು, ಏಕಾಂಗಿಯಾಗಿರುವುದು ಇವುಗಳೆಲ್ಲ ಮಾನಸಿಕ ಕಾಯಿಲೆಯ ಲಕ್ಷಣಗಳು. ಇಂತಹ ಕಾಯಿಲೆಯ ಲಕ್ಷಣಗಳು ಉಳ್ಳ ವ್ಯಕ್ತಿಯನ್ನು ನೀವು ಎಲ್ಲಾದರೂ ಕಂಡಿದ್ದರೆ ಅವರಿಗೆ 9036664271 ಈ ನಂಬರಿಗೆ ಕರೆಮಾಡಿ ಮಾಹಿತಿ ತಿಳಿಸಬೇಕು. ಹುಮನಾಬಾದ ತಾಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರತಿ ಬುಧವಾರ ವೈದ್ಯರು ಬರುತ್ತಾರೆ. ಉಚಿತ ಚಿಕಿತ್ಸೆ ಇರುವುದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1:00 ಗಂಟೆವರೆಗೆ ಇರುತ್ತಾರೆ. ನೀವು ಮಾನಸಿಕ ಕಾಯಿಲೆ ಉಳ್ಳವರಿಗೆ ಸಹಾಯ ಮಾಡಿರಿ ಎಂದು ಮಾಹಿತಿ ನೀಡಲಾಯಿತು.

## “ಸರ್ಕಾರಿ ಬಾಲಕರ ಪ್ರೌಢಶಾಲೆಯಲ್ಲಿ ಮಾನಸಿಕ ಆರೋಗ್ಯದ ಕುರಿತು ಜಾಗೃತಿ”



22 ಆಗಸ್ಟ್ 2025ರಂದು ಚಿಟಗುಪ್ಪಾ ತಾಲೂಕಿನ ನಿರ್ಣ ಗ್ರಾಮದ ಸರ್ಕಾರಿ ಬಾಲಕರ ಪ್ರೌಢಶಾಲೆಯಲ್ಲಿ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಮತ್ತು ಅಜೀಮ್ ಪ್ರೇಮ್‌ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಮಕ್ಕಳಿಗೆ ಮಾನಸಿಕ ಆರೋಗ್ಯದ ಕುರಿತು ಅರಿವು ಮೂಡಿಸಲಾಯಿತು. ಈ ಕಾರ್ಯಕ್ರಮಕ್ಕೆ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಆಪ್ತ ಸಮಾಲೋಚಕರಾದ ಶ್ರೀ ಅರುಣ್‌ಕುಮಾರ್ ಕೋಟೆ ಹಾಗೂ ಕಾರ್ಯಕರ್ತರಾದ ಅರುಣ್‌ಕುಮಾರ್ ಎಸ್ ಇವರು ಉಪಸ್ಥಿತರಿದ್ದರು. ಮಕ್ಕಳಿಗೆ ಮಾನಸಿಕ ಆರೋಗ್ಯದ ಕುರಿತು ವಿವರಿಸುತ್ತಾ ಕಾಯಿಲೆಯ ಲಕ್ಷಣಗಳು ಲಭ್ಯವಿರುವ ಸೂಕ್ತ ಚಿಕಿತ್ಸೆ ಹಾಗೂ ಉಚಿತ ಚಿಕಿತ್ಸೆಗೆ ಸಂಬಂಧಪಟ್ಟ ಸರ್ಕಾರಿ ಆಸ್ಪತ್ರೆಗಳ ಸೂಕ್ತ ಮಾಹಿತಿಯನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯ ಗುರುಗಳು ಹಾಗೂ ಶಾಲಾ ಸಿಬ್ಬಂದಿ ವರ್ಗದವರು ಮತ್ತು ಮುದ್ದು ಮಕ್ಕಳು ಒಟ್ಟು 102 ಜನರು ಭಾಗವಹಿಸಿದ್ದರು.

## “ಎರಡೂವರೆ ವರ್ಷದ ಮೌಲ್ಯಮಾಪನ ಸಭೆ”





7 ಮತ್ತು 8 ಅಗಸ್ಟ್ 2025ರಂದು ಆರ್ಬಿಟ್ ಸಂಸ್ಥೆಯ ಸಭಾಂಗಣದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್‌ಜಿ ಫೌಂಡೇಶನ್ ಇವರ ಸಯುಕ್ತಶ್ರಯದಲ್ಲಿ ನಡೆಯುತ್ತಿರುವ ನವಜೀವನ ಕಾರ್ಯಕ್ರಮದಡಿಯಲ್ಲಿ ಶ್ರೀ ಸಂಜಯ್ ಕುಲಕರ್ಣಿ ಅಜಿಂ ಪ್ರೇಮ್ ಜಿ ಫೌಂಡೇಶನ್‌ನ ಪ್ರಾದೇಶಿಕ ಅಧಿಕಾರಿ ರವರು ನವಜೀವನ ಕಾರ್ಯಕ್ರಮದ ಎರಡೂವರೆ ವರ್ಷದ ಮೌಲ್ಯಮಾಪನ ಸಭೆಯಲಿ ಭಾಗವಹಿಸಿ ಕಾರ್ಯಕ್ರಮವು ಹಾಕಿಕೊಂಡ ಗುರಿಯ ಪ್ರಕಾರ ಯಾವ ಹಂತದಲ್ಲಿ ತಲುಪಿದೆ ಎಂದು ತಿಳಿದುಕೊಳ್ಳುವ ಪ್ರಯುಕ್ತ ಮೌಲ್ಯಮಾಪನ ಸಭೆಯಲ್ಲಿ ಚರ್ಚಿಸಲಾಯಿತು. ತದನಂತರ ಹುಮ್ನಾಬಾದ್ ಪಟ್ಟಣ, ನಂದಗಾವ್, ಘಾಟಬೋರಳ ಹಾಗೂ ಕನಕಟ್ಟ ಗ್ರಾಮಗಳ ಫಲಾನುಭವಿ, ಆಶಾ ಕಾರ್ಯಕರ್ತೆ, ವಿ.ಆರ್.ಡಬ್ಲ್ಯೂ ವಿಕಲಚೇತನರ ಗುಂಪುಗಳನ್ನು ಹಾಗೂ ಟಿಡಿಪಿಓ ಸದಸ್ಯರನ್ನು ಭೇಟಿನೀಡಿ ಸಂಭಾಷಣೆಯನ್ನು ಮಾಡುತ್ತಾ ಕಾರ್ಯಕ್ರಮದ ಸುಸ್ಥಿರತೆ ಕುರಿತು ಚರ್ಚಿಸಲಾಯಿತು. ಯೋಜನೆಯಲ್ಲಿ ಎದುರಿಸುತ್ತಿರುವ ಸವಾಲುಗಳು ಹಾಗೂ ಅದನ್ನು ಸೂಕ್ತವಾಗಿ ನಡೆಯುವಲ್ಲಿ ಯಾವರೀತಿ ಕಾರ್ಯ ನಿರ್ವಹಿಸಬಹುದು. ಮಾನಸಿಕ ಅಸ್ವಸ್ಥರು ಗುಣಮುಖ ಹೊಂದಿದ ಸಂದರ್ಭದಲ್ಲಿ ಅವರನ್ನು ಜೀವನೋಪಾಯ ಚಟುವಟಿಕೆಗಳನ್ನು ತರಬೇತಿ ನೀಡುವ ತಮ್ಮ ಮೂಲಕ ಜೀವನ ಉತ್ತಮ ರೀತಿಯಲ್ಲಿ ಕಟ್ಟಿಕೊಳ್ಳುವುದರಲ್ಲಿ ಸಶಕ್ತರನ್ನಾಗಿ ಮಾಡಲು ಕಾರ್ಯನಿರ್ವಹಿಸುತ್ತಿದೆ. ಅದು ಕಾರ್ಯರೂಪಕ್ಕೆ ಬರುವಂತೆ ಚರ್ಚಿಸಲಾಯಿತು. ಈ ಸಭೆಯಲ್ಲಿ ಆರ್ಬಿಟ್ ಸಂಸ್ಥೆಯ ನಿರ್ದೇಶಕರು, ಎಪಿಎಫ್ ಪ್ರತಿನಿಧಿಗಳು, ಸಹ ನಿರ್ದೇಶಕರು, ಕಾರ್ಯಕ್ರಮದ ವ್ಯವಸ್ಥಾಪಕರು, ಫಾದರ್ ಅನಿಲ್ ಕ್ರಾಸ್ತಾ ಹಾಗೂ ನವಜೀವನ ಕಾರ್ಯಕ್ರಮದ ಸಿಬ್ಬಂದಿ ವರ್ಗದವರು ಭಾಗವಹಿಸಿದರು.

## "ಭೀಮರಾವ್ ವಿಶೇಷ ವಿಕಲಚೇತನರ ಸಂಘದ ಸಭೆ"



ದಿನಾಂಕ 19/08/2025 ರಂದು ಹುಮ್ನಾಬಾದ್ ತಾಲೂಕಿನ ಹಳ್ಳಿಖೇಡ್ (ಬಿ) ಪಟ್ಟಣದ ಓಲ್ಡ ಭೀಮ್‌ನಗರ್ ಕಾಲೋನಿಗೆ ಭೇಟಿ ನೀಡಿ ಅಲ್ಲಿಯ ಮಾನಸಿಕ ಅಸ್ವಸ್ಥರ ಮನೆಗಳಿಗೆ ಭೇಟಿನೀಡಿ ಮಾತ್ರೆಗಳನ್ನು ಪರಿಶೀಲಿಸಿ ಅವರ ಆರೋಗ್ಯ ವಿಚಾರಿಸಲಾಯಿತು. ನಂತರ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಹಾಗೂ ಅಜೀಮ್ ಪ್ರೇಮ್‌ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಭೀಮರಾವ್ ವಿಶೇಷ ವಿಕಲಚೇತನರ ಸಂಘದ ಸಭೆ ಸೇರಲಾಯಿತು, ಇಂದಿನ ಸಭೆಯಲ್ಲಿ ವಿಶೇಷ ಚೇತನ ಮತ್ತು ವಿಕಲಚೇತನರಿಗೆ ಸರ್ಕಾರದಿಂದ ದೊರೆಯುವ ವಿವಿಧ ಸೌಲಭ್ಯಗಳ ಕುರಿತು ಮಾಹಿತಿಯನ್ನು ನೀಡಲಾಯಿತು. ವಿಕಲಚೇತನರಿಗೆ ಬಸ್ಸುಗಳಲ್ಲಿ ಪ್ರಯಾಣಿಸಲು ಉಚಿತ ಬಸ್ ಪಾಸ್ ನೀಡಲಾಗುತ್ತದೆ ಹಾಗೂ ಸಂಚರಿಸಲು ತ್ರಿಚಕ್ರ ವಾಹನಗಳು ನೀಡಲಾಗುತ್ತದೆ ಹಾಗೂ ಬ್ಯಾಂಕುಗಳಲ್ಲಿ ರಿಯಾಯಿತಿ ದರದಲ್ಲಿ ಸಾಲಗಳನ್ನು ಮಂಜೂರು ಮಾಡಲಾಗುತ್ತದೆ. ವಿಶೇಷ ಚೇತನರಿಗೆ ಜಿಲ್ಲಾ ಆಸ್ಪತ್ರೆ, ತಾಲೂಕ ಆಸ್ಪತ್ರೆ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಉಚಿತ ಚಿಕಿತ್ಸೆ ನೀಡಲಾಗುತ್ತದೆ. ಹಾಗೂ ಆಪ್ತ ಸಮಾಲೋಚನೆ ಸಹ ಮಾಡಲಾಗುತ್ತದೆ. ಜಿಲ್ಲಾ ಆಸ್ಪತ್ರೆಗಳಲ್ಲಿ ವಿಶೇಷ ಚೇತನರಿಗೋಸ್ಕರ 5 ಪ್ರತಿಶತ ಬಜೇಟ್‌ಗಳನ್ನು ಕಾಯ್ದಿರಿಸಲಾಗುತ್ತದೆ. ಈ ರೀತಿ ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಪಡೆದುಕೊಳ್ಳಬೇಕೆಂದು ಸಂಘದ ಸದಸ್ಯರಿಗೆ ಮನವರಿಕೆ ಮಾಡಿಕೊಡಲಾಯಿತು.

## "ಮಾನಸಿಕ ಕಾಯಿಲೆ ಉಳ್ಳವರಿಗೆ ದೈನಂದಿನ ಚಟುವಟಿಕೆ"



ಹುಮನಾಬಾದ್ ತಾಲೂಕಿನ ಆರ್ಬಿಟ್ ಸಂಸ್ಥೆಯಲ್ಲಿ ನವಜೀವನ ಕಾರ್ಯಕ್ರಮದ ಅಜಿಂ ಪ್ರೇಮ್‌ಜಿ ರವರ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಕಾಯಿಲೆ ಉಳ್ಳವರಿಗೆ ದೈನಂದಿನ ಚಟುವಟಿಕೆ ಕುರಿತು 25. 26 ಆಗಸ್ಟ 2025ರಂದು ಎರಡು ದಿನದ ಕ್ಯಾಂಪ ಆಯೋಜಿಸಲಾಯಿತ್ತು. ಮಾನಸಿಕ ಅನಾರೋಗ್ಯಸ್ಥರಿಗೆ ದೈನಂದಿನ ಚಟುವಟಿಕೆಯ ಕುರಿತು ತರಬೇತಿ ನೀಡಿದರು. ಈ ಕಾರ್ಯಕ್ರಮವನ್ನು ಉದ್ಘಾಟಿಸಿದ ವಂದನೇಯ ಫಾದರ್ ವೀಕ್ಟರ ವಾಸ್ ನಿರ್ದೇಶಕರು ಆರ್ಬಿಟ್ ಸಂಸ್ಥೆ ಹುಮನಾಬಾದ್, ಫಲಾನುಭವಿಗಳು ಪ್ರತಿನೀತ್ಯದ ವ್ಯಯಕ್ತಿಕ ಜೀವನ ರೂಪಿಸಿಕೋಳಲು ದೈನಂದಿನ ಚಟುವಟಿಕೆಯ ತರಬೆತಿ ಬಹಳ ಅಗತ್ಯ. ಅದಕ್ಕೆ ಎಲ್ಲಾ ಫಲಾನುಭವಿಗಳು ತರಬೇತಿಯನ್ನು ಪಡೆದುಕೋಂಡು ತಮ್ಮ ಜೀವನ ರೋಪೀಸಿಕೋಳಬೆಕೆಂದು ಕರೆ ನೀಡಿದರು. ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಅರುಣ್‌ಕುಮರ ಕೋಟೆ ರವರು ವಿವಿಧ ಚಟುವಟಿಕೆಗಳನ್ನು ಬಳಸಿ ಫಲಾನುಭವಿಗಳಿಗೆ ತಿಳುವಳಿಕೆಯಾಗುವಂತೆ ಚಟುವಟಿಕೆಗಳನ್ನು ಮಾಡಿಸಿದರು. ದಿನನಿತ್ಯ ಮನೆಯಲ್ಲಿ ಮಾಡಲು ತೀಳಿಸಿದರು. ಕಾರ್ಯಕ್ರಮವನ್ನು ಶ್ರೀಮತಿ ಮಮತಾ ರವರು ನಿರ್ವಹಿಸಿದರು. ಶ್ರೀ ಹನುಮಂತ ರವರು ವಂದನಾರ್ಪಣೆಯೊಂದಿಗೆ ತರಬೇತಿ ಅಂತ್ಯಗೊಳಿಸಿದರು.

## "ಆತ್ಮಹತ್ಯೆಗೆ ಪ್ರಯತ್ನಿಸಿದ ಮಾನಸಿಕ ಅಸ್ವಸ್ಥನಿಗೆ ಸೂಕ್ತ ಚಿಕಿತ್ಸೆ ಕೊಡಿಸಿದ ಆರ್ಬಿಟ್ ಸಂಸ್ಥೆ"



18 ಆಗಸ್ಟ 2025ರಂದು ಹುಮನಾಬಾದ್ ಪಟ್ಟಣಕ್ಕೆ ಹೊಂದಿಕೊಂಡಿರುವ ಧುಮ್ಮನಸೂರ ಗ್ರಾಮದಲ್ಲಿ ತೀವ್ರ ಮಾನಸಿಕ ಅಸ್ವಸ್ಥನಾದ ಶ್ರೀ ಪ್ರಭು ಮಧ್ಯರಾತ್ರಿಯಲ್ಲಿ ಅಲೆಯುತ್ತ ಗ್ರಾಮದ ಪಕ್ಕದಲ್ಲಿರುವ ಬಾವಿಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳಲೆಂದು ಬಿದ್ದಿರುತ್ತಾರೆ. ಆದರೆ ಅದೃಷ್ಟ ವಶಾತ್ ಅವರಿಗೆ ಯಾವುದೇ ಪ್ರಾಣಪಾಯ ಆಗಿರುವುದಿಲ್ಲ. ಈತನ ತಾಯಿ ಶ್ರೀಮತಿ ಚಂದ್ರಮ್ಮ ಅವರು ಸಹ ಕೌಟುಂಬಿಕ ಕಾರಣದಿಂದಾಗಿ ತೀವ್ರ ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದಾರೆ. ತಾಯಿಯ ಪರಸ್ಥಿತಿಯನ್ನು ಕಂಡ ಮಗನು ಮಾನಸಿಕ ಕಾಯಿಲೆಗೆ ಒಳಗಾಗಿದ್ದಾನೆ. ಪರಿಸ್ಥಿತಿಯನ್ನು ಗಮನಿಸಿದ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರು ಈತನ ಪುನರ್ವಸತಿಗಾಗಿ ತ್ವರಿತ ಕ್ರಮ ಕೈಗೊಂಡರು. ಮೊದಲಿಗೆ ಪೊಲೀಸ್ ಠಾಣೆಗೆ ವರದಿಯನ್ನು ಮಾಡುವ ಮೂಲಕ ತಾಲೂಕಿನ ಆಸ್ಪತ್ರೆಯಲ್ಲಿ ಪರೀಕ್ಷಿಸಿದರು. ತದನಂತರ ಜಿಲ್ಲಾ ಆಸ್ಪತ್ರೆಯ ಮಾನಸಿಕ ಆರೋಗ್ಯ ಘಟಕಕ್ಕೆ ಆಂಬುಲೆನ್ಸ್ ಮೂಲಕ ತಾಯಿ ಮಗನಿಗೆ ಸ್ಥಳಾಂತರಿಸಲಾಯಿತು. ಎಂಟು ದಿನಗಳ ವಸತಿ ಸಹಿತ ಚಿಕಿತ್ಸೆ ನೀಡುವ ಮೂಲಕ ಅವರಿಗೆ ಉತ್ತಮ ಚಿಕಿತ್ಸೆಯನ್ನು ನೀಡಿ ಮಾನಸಿಕ ಕಾಯಿಲೆಯಿಂದ ಗುಣಮುಖರಾಗಲು ಜಿಲ್ಲಾ ಆಸ್ಪತ್ರೆಯ ಸಿಬ್ಬಂದಿ ವರ್ಗದವರು ಸಹಕರಿಸಿದರು. ಸದ್ಯ ತನ್ನ ಮನೆಗೆ ಹಿಂತಿರುಗಿದ ತಾಯಿ ಮಗ ತಕ್ಕಮಟ್ಟಿಗೆ ಗುಣಮುಖರಾಗಿ ತಮ್ಮ ಮನೆಯಲ್ಲಿ ವಾಸಿಸುತ್ತಿದ್ದಾರೆ. ಸಂಸ್ಥೆಯಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಸಕ್ರಿಯ ಭಾಗವಹಿಸುವ ಮೂಲಕ ಮಾನಸಿಕ ಆರೋಗ್ಯದ ಕುರಿತು ಮಾಹಿತಿ ಹಾಗೂ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಇವರಿಗೆ ಉತ್ತಮ ಚಿಕಿತ್ಸೆ ನೀಡುವಲ್ಲಿ ಸಹಕರಿಸಿದ ಪೊಲೀಸ್ ಇಲಾಖೆ ಹಾಗೂ ತಾಲೂಕ ಮತ್ತು ಜಿಲ್ಲಾ ಆಸ್ಪತ್ರೆಯ ಸಿಬ್ಬಂದಿ ವರ್ಗದವರಿಗೆ ಫಲಾನುಭವಿಗಳು ಹಾಗೂ ಆರ್ಬಿಟ್ ಸಂಸ್ಥೆಯ ಸಿಬ್ಬಂದಿ ವರ್ಗದವರು ಧನ್ಯವಾದಗಳು ತಿಳಿಸಿದ್ದಾರೆ.



## “ಸಮುದಾಯ ಆಧಾರಿತ ಪುನರ್ವತಿ ಕಾರ್ಯಕ್ರಮದಲ್ಲಿ ಆಪ್ತ ಸಮಾಲೋಚನೆ”



ಆಗಸ್ಟ್ 2025ರಂದು ಆರ್ಬಿಟ್ ಸಂಸ್ಥೆ ಹುಮ್ನಾಬಾದ್, ನವಜೀವನ ಎಪಿಎಫ್ ಯೋಜನೆ ಅಡಿಯಲ್ಲಿ ಸಮುದಾಯ ಆಧಾರಿತ ಪುನರ್ವತಿ ಕಾರ್ಯಕ್ರಮದಲ್ಲಿ ಘೋಡವಾಡಿ ಗ್ರಾಮದಲ್ಲಿ ಚಿಕಿತ್ಸೆ ಪಡೆದೆ ಇರುವ ಹಾಗೂ ಚಿಕಿತ್ಸೆ ಪಡೆಯುತ್ತಿರುವ ಫಲಾನುಭವಿಗಳಿಗೆ ಆಪ್ತ ಸಮಾಲೋಚನೆಗೆ ಒಳಪಡಿಸಲಾಯಿತು. ಫಲಾನುಭವಿಗಳ ನಿರಂತರ ಚಿಕಿತ್ಸೆ ಪಡೆಯುವ ಮಹತ್ವ ತಿಳಿದುಕೊಳ್ಳಲಾಯಿತು. ಅದೇರೀತಿ ಅವರ ದಿನನಿತ್ಯ ಜೀವನದಲ್ಲಿ ಶಿಸ್ತು, ಆರೋಗ್ಯಕರ ಅಭ್ಯಾಸಗಳು ಮತ್ತು ಆರೋಗ್ಯದಲ್ಲಿ ಸುಧಾರಣೆ ಹೊಂದವ ಮೂಲ ತಂತ್ರಗಳೊಂದಿಗೆ ಆರೋಗ್ಯದಲ್ಲಿ ಬದಲಾವಣೆಯನ್ನು ಕಂಡುಕೊಳ್ಳಲು, ಆಪ್ತ ಸಮಾಲೋಚನೆಗೆ ಒಳಗಾದ ಫಲಾನುಭವಿಗಳಲ್ಲಿ ಚರ್ಚಿಸಿ, ಮೂಡನಂಬಿಕೆಯಲ್ಲಿ ಇನ್ನು ಹೆಚ್ಚಾಗಿ ಇದ್ದಾರಾ? ಅಥವಾ ಮೂಡನಂಬಿಕೆಯಿಂದ ಹೊರಗಡೆ ಬಂದಿದ್ದಾರಾ? ದಿನನಿತ್ಯದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಮತ್ತು ಅವುಗಳಲ್ಲಿ ಏನಾದರೂ ತೊಂದರೆ ಕಂಡು ಬಂದರೆ ಕುಟುಂಬದಲ್ಲಿ ಹೇಳಿಕೊಳ್ಳುತ್ತಾರೆ, ಎಂಬ ಮೂಲತ ಅಂಶವನ್ನು ಆಪ್ತ ಸಮಾಲೋಚನೆಯಲ್ಲಿ ವಾಹಿನಿಗೆ ಬರುತ್ತದೆ. ಅನಾರೋಗ್ಯಕರ ಅಭ್ಯಾಸಗಳು (ಉದಾ: ಮದ್ಯಪಾನ, ಧೂಮಪಾನ, ಅಲೆದಾಟ) ಇವುಗಳ ಬಗ್ಗೆ ಜಾಗೃತಿ ಅರಿವನ್ನು ಕುಟುಂಬದ ಪೋಷಕರಿಗೆ ಮಾಹಿತಿಯನ್ನು ನೀಡಲಾಗಿರುತ್ತದೆ. ಮುಂದಿನ ಹಂತದಲ್ಲಿ ಪಾಲಿಸಬೇಕಾದ ವಿಷಯಗಳು ಅಂದರೆ ಔಷಧಿ/ಚಿಕಿತ್ಸೆ ನಿರಂತರವಾಗಿ ಪಡೆಯುವುದು. ದಿನನಿತ್ಯ ಸ್ವಚ್ಚತೆ ಮತ್ತು ಚಟುವಟಿಕೆಯಲ್ಲಿ ತೊಡಗುವುದು, ಕುಟುಂಬದ ಸದಸ್ಯರಿಗೆ ಸ್ವಲ್ಪ ಸಹಾಯ ಮಾಡುವುದು. ಆರೋಗ್ಯಕರ ಜೀವನ ಶೈಲಿಯನ್ನು ಅಳವಡಿಸಿಕೊಡು ಜೀವನದಲ್ಲಿ ಕೆಲವು ನಿರ್ಣಯಗಳು ಪಡೆಯುವುದುಕೊಳ್ಳುತ್ತಾ, ಆಪ್ತ ಸಮಾಲೋಚನೆಯ ಮೂಲಕ ಫಲಾನುಭವಿಗೆ ಪ್ರೇರಣೆ ನೀಡಲಾಗಿತ್ತು. ಚಿಕಿತ್ಸೆ ಮತ್ತು ದಿನನಿತ್ಯ ಜೀವನದಲ್ಲಿ ಬದಲಾವಣೆ ತರಲು ಮಾರ್ಗದರ್ಶನ ನೀಡಲಾಗುತ್ತದೆ. ಮುಂದಿನ ದಿನಗಳಲ್ಲಿ ನಿರಂತರವಾಗಿ ಸಲಹೆ ಸೂಚನೆಗಳನ್ನು ಪಾಲಿಸಲು. ಮನೋವೈದ್ಯರೊಂದಿಗೆ ಸಂಪರ್ಕ ಪಡೆಯಲು ಆಗುತ್ತಿರುವಂತ ತೊಂದರೆಗಳನ್ನು ಹೇಳಿ ಚಿಕಿತ್ಸೆ ಪಡೆಯುವಲ್ಲಿ ಮುಂದೆ ಬನ್ನಿ ಹಾಗೂ ಆಪ್ತ ಸಮಾಲೋಚನೆಯ ಸಹಾಯವಾಣಿಗೆ ಕರೆ ಮಾಡಿ ನಿಮ್ಮ ಮಾಹಿತಿಗಳನ್ನು ತಿಳಿಸಿ. ನಮ್ಮ ಆರ್ಬಿಟ್ ಸಂಸ್ಥೆಯಲ್ಲಿ ಆಪ್ತ ಸಮಲೋಚನೆಗಾಗಿ ಒಂದು ಕೇಂದ್ರವನ್ನು ಸಿದ್ಧಪಡಿಸಲಾಗಿದೆ. ಮುಂದಿನ ದಿನಗಳಲ್ಲಿ ಇದರ ಉಪಯೋಗವನ್ನು ಪಡೆದುಕೊಳ್ಳಬೇಕು. ಎಂದು ತಿಳಿಸುತ್ತಾ ಹಾಗೂ ಸಂಸ್ಥೆಗಳಲ್ಲಿ ನಡೆಯುವ ತರಬೇತಿಗಳಲ್ಲಿ ಭಾಗವಹಿಸಲು ಅವಕಾಶ ಪಡೆದುಕೊಳ್ಳಿ ಆತ್ಮವಿಶ್ವಾಸ, ಧೈರ್ಯ, ಸಹನೆ, ಪ್ರೀತಿ ಹಾಗೂ ಬೆಂಬಲವನ್ನು ಪಡೆದುಕೊಳ್ಳಲು ನಿಮಗೆ ಸಹಾಯಕವಾಗುತ್ತದೆ ಎಂದು ತಿಳಿಸಲಾಯಿತು. ಆದ್ದರಿಂದ ಇವರು ಸಂಸ್ಥೆಯ ನಿರ್ದೇಶಕರಿಗೆ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಸಂಸ್ಥೆಯವರಿಗೆ ಆತ್ಮೀಯ ಹೃದಯ ಅಂತರಾಳದಿಂದ ವಂದನೆಗಳನ್ನು ಸಲ್ಲಿಸಿರುತ್ತಾರೆ.

## “ಜೈ ಭವಾನಿ ಮಾನಸಿಕ ಅಸ್ವಸ್ಥರ ಪೋಷಕರ ಸಭೆ”



ದಿನಾಂಕ 21 ಆಗಸ್ಟ್ 2025ರಂದು ಹುಮನಾಬಾದ್ ಪಟ್ಟಣದ ಜೇರಪೇಟ ಕಾಲೋನಿಯಲ್ಲಿ ಜೈ ಭವಾನಿ ಮಾನಸಿಕ ಅಸ್ವಸ್ಥರ ಪೋಷಕರ ಸಭೆ ಮಾಡಲಾಯಿತು. ಈ ಸಭೆಯಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಕಂಠಿ ಅವರು ಪೋಷಕರ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಸಂಘದ ಮೂಲಕ ಸರಕಾರಿ ಸೌಲಭ್ಯಗಳನ್ನು ಪಡೆದುಕೊಳ್ಳುವ ಕುರಿತು, ಫಲಾನುಭವಿಗಳು ವೈದ್ಯರು ಸೂಚಿಸಿದಂತೆ ನಿರಂತರವಾಗಿ ಮಾತ್ರೆಗಳನ್ನು ತೆಗೆದುಕೊಳ್ಳುವದು. ಹಾಗೂ ಪರಿಸರದ ಕುರಿತು ಕಾಳಜಿ ವಹಿಸುವಂತೆ ಮಾಹಿತಿ ನೀಡಿದರು. ಪೋಷಕರು ಹಾಗೂ ಫಲಾನುಭವಿಗಳು ಪರಸ್ಪರ ಚರ್ಚಿಸಿ ತಮ್ಮಲ್ಲಿ ಇರುವಂತಹ ಸಂದೇಹಗಳನ್ನು ಪರಿಹರಿಸಿಕೊಂಡರು ಹಾಗೂ ತಮ್ಮ ಬೇಡಿಕೆಗಳ ಕುರಿತು ಚರ್ಚಿಸಿದರು.

## “ವಿಶೇಷ ಚೇತನರ ಡಿಪಿಯೋಸ್ ಮೀಟಿಂಗ್”



ದಿನಾಂಕ. 02/09/2025 ರಂದು ಹುಮ್ನಾಬಾದ್ ತಾಲೂಕಿನ ಕಲ್ಲೂರ್ ಗ್ರಾಮದಲ್ಲಿ ವಿಶೇಷ ಚೇತನರ ಡಿಪಿಯೋಸ್ ಮೀಟಿಂಗ್ ಮಾಡಲಾಯಿತು. ಈ ಸಭೆಯಲ್ಲಿ ಚರ್ಚೆ ಮಾಡಿದ ವಿಷಯ ದಿನಾಂಕ 03/09/2025 ರಂದು ನಡೆಯುವ ರಕ್ತದಾನದ ಶಿಬಿರದ ಕುರಿತು ಅರಿವು ಮೂಡಿಸಲಾಯಿತು. ಆರ್ಬಿಟ್ ಸಂಸ್ಥೆಯ ಪಾಲಕ್ಕಿ ಸಂತ ಮದರ್ ತೆರೇಸಾರವರ ಸ್ಮರಣಾರ್ಥ ಪ್ರಯುಕ್ತ ನಡೆಯುವ ರಕ್ತದಾನ ಶಿಬಿರದ ಬಗ್ಗೆ ಸಂಪಿಗೆ ವಿಶೇಷ ಚೇತನರ ಸಂಘದಲ್ಲಿ ಸದಸ್ಯರಿಗೆ ಮಾಹಿತಿ ನೀಡಲಾಯಿತು. ಮತ್ತು ನಿಮ್ಮ ನಿಮ್ಮಲ್ಲಿ ರಕ್ತದಾನ ಮಾಡುವವರು ಇದ್ದರೆ ನೀವು ಕಳಿಸಿರಿ ರಕ್ತದಾನ ಶ್ರೇಷ್ಠ ದಾನ ಆದ್ದರಿಂದ ಪ್ರತಿಯೊಬ್ಬ ಈ ಶಿಬಿರದಲ್ಲಿ ಭಾಗವಹಿಸಿ ರಕ್ತದಾನ ಮಾಡಬೇಕೆಂದು ಕೇಳಿಕೊಳ್ಳಲಾಯಿತು. ಹೆಣ್ಣು ಗಂಡು ಎಂಬ ಭೇದವಿಲ್ಲದೆ 18 ರಿಂದ 60 ವರ್ಷದ ಒಳಗಿನವರು ಆರೋಗ್ಯವಂತ ವ್ಯಕ್ತಿಗಳು ರಕ್ತದಾನ ಮಾಡುವ ಮನಸುಳ್ಳವರು ಧಾರಾಳವಾಗಿ ರಕ್ತದಾನ ಮಾಡಿ ಎಂದು ಮಾಹಿತಿ ನೀಡಲಾಯಿತು.

## "ಜೈ ಶ್ರೀ ಇಸ್ಮಾಯಿಲ್ ಖಾದ್ರಿ ವಿಶೇಷ ವಿಕಲ ಚೇತನರ ಪೋಷಕರ ಸಂಘ ಸಭೆ"



18 ಆಗಸ್ಟ್ 2025ರಂದು ಹುಮನಾಬಾದ ತಾಲೂಕಿನ ಘೋಡವಾಡಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್‌ಜಿ ಫೌಂಡೇಶನ್ ಇವರ ಸಂಯುಕ್ತಾ ಆಶ್ರಯದಲ್ಲಿ ಜೈ ಶ್ರೀ ಇಸ್ಮಾಯಿಲ್ ಖಾದ್ರಿ ವಿಶೇಷ ವಿಕಲ ಚೇತನರ ಪೋಷಕರ ಸಂಘದ ಸಭೆಯನ್ನು ಮಾಡಲಾಯಿತು. ಈ ಸಭೆಗೆ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಆಪ್ತಸಮಲೋಚಕರಾದ ಶ್ರೀ ರವಿ ಹಾಗೂ ಕಾರ್ಯಕರ್ತೆಯಾದ ಶ್ರೀಮತಿ ಪೂಜಾ ರವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ. ಮಾನಸಿಕ ಅಸ್ವಸ್ಥರ ದಿನ ನಿತ್ಯದ ಚಟುವಟಿಕೆಗಳ ಬಗ್ಗೆ ಅವರ ಆರೋಗ್ಯದ ಬಗ್ಗೆ ವಿಚಾರಿಸಿ ನಿರಂತರ ಚಿಕಿತ್ಸೆ ಬಗ್ಗೆ ಕುಟುಂಬದ ಪಾತ್ರ ಮತ್ತು ಮಾತ್ರೆಗಳು ಸಿಗದೆ ಇರುವ ಸಂಧರ್ಭದಲ್ಲಿ ಸಭೆಯ ಸದಸ್ಯರು ಒಟ್ಟು ಸೇರಿ ಯಾವರೀತಿಯಾಗಿ ವಕಾಲತ್ತು ಮತ್ತು ಲಾಬಿ ಮಾಡಬೇಕು ಎನ್ನುವ ಕುರಿತು ಮಾಹಿತಿಯನ್ನು ನಿಡಲಾಯಿತು.

## "ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ"

## ಬೆಳವಣಿಗೆಯಿಂದ ಕುಂಠಿತ ಹೊಂದಿರುವ ಮಕ್ಕಳಿಗೆ ಸಾಧನೆ ಸಲಕರಣೆಗಳ ಕುರಿತು ಜಾಗೃತಿ"



21 ಆಗಸ್ಟ್ 2025ರಂದು ಹುಮ್ನಾಬಾದ್ ತಾಲೂಕಿನ ದುಮ್ಮನ್ಸೂರ್ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆ ಶ್ರೀಮತಿ ಕವಿತಾ ರವರು ಉಪ ಆರೋಗ್ಯ ಕೇಂದ್ರದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ CHO ಪ್ರಿಯಾಂಕ ಮೇಡಂ ರವರು, HIO ಅಮಿತ್ ಸರ್ ರವರು ಉಪಸ್ಥಿತರಿದ್ದರು. ಬೆಳವಣಿಗೆಯಿಂದ ಕುಂಠಿತ ಹೊಂದಿರುವ ಮಕ್ಕಳಿಗೆ ಕುಳಿತುಕೊಳ್ಳುವುದಕ್ಕೆ, ನಡೆಯುವುದಕ್ಕೆ, ಕತ್ತು ಕೂರದೆ ಇರುವಂತಹ ಮಕ್ಕಳಿಗೆ ಆರ್ಬಿಟ್ ಸಂಸ್ಥೆಯ ಕಡೆಯಿಂದ ಸಾಧನೆ ಸಲಕರಣೆಗಳನ್ನು ಕೊಟ್ಟು ಚಟುವಟಿಕೆ ಮಾಡುವುದರ ಮುಖಾಂತರ ಬದಲಾವಣೆಯನ್ನು ತರಲಿದ್ದೇವೆ ಹುಮ್ನಾಬಾದ್ ತಾಲೂಕಿನಲ್ಲಿ ಸ್ವಲ್ಪ ಮಟ್ಟಿಗೆ ಮಕ್ಕಳು ಬದಲಾವಣೆ ಹೊಂದಿದ್ದಾರೆ. ಅಂತಹ ಮಕ್ಕಳು ಕಂಡು ಬಂದರೆ ನಿಮ್ಮ ಹಳ್ಳಿಯಲ್ಲಿ ಇರುವಂತಹ ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಆಶಾ ಕಾರ್ಯಕರ್ತರಿಗೆ ತಿಳಿಸುವುದಾಗಿ ಮಾಹಿತಿ ನೀಡಲಾಯಿತು. ಹಾಗೂ ಸರಕಾರದ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಲಾಯಿತು ಮಕ್ಕಳಿಗೆ ಯುಡಿಐಡಿ ಕಾರ್ಡ್ ಕೂಡ ಮಾಡಿಸಿಕೊಡಲಿದ್ದೇವೆಂದು ತಿಳಿಸಲಾಯಿತು. ಕಾರ್ಯಕ್ರಮದಲ್ಲಿ ಗ್ರಾಮದ ಸದಸ್ಯರು ಒಟ್ಟು 15 ಜನ ಭಾಗವಹಿಸಿ ಮಾಹಿತಿ ಪಡೆದುಕೊಂಡಿದ್ದಾರೆ.

## "ಡೆಂಗಿ ಜ್ವರ ನಿಯಂತ್ರಣ ನಮ್ಮೆಲ್ಲರ ಜವಾಬ್ದಾರಿ"



06 ಆಗಸ್ಟ್ 2025ರಂದು ಹುಮ್ನಾಬಾದ್ ತಾಲೂಕಿನ ಘಾಟಬೋರಾಳ ಗ್ರಾಮದ ಉಪ ಕೇಂದ್ರದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕರ್ತರಾದ ಶ್ರೀ ಸೂರ್ಯಕಾಂತ್ ರವರು ಸಮುದಾಯದ ಸುಮಾರು 20 ಜನರಿಗೆ ಮಳೆಗಾಲದಲ್ಲಿ ಬರುವಂತಹ ರೋಗಗಳಲ್ಲಿ ಒಂದಾದ ಡೆಂಗಿ ಜ್ವರ ನಿಯಂತ್ರಣ ಕುರಿತು ಮಾಹಿತಿಯನ್ನು ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಆಶಾ ಕಾರ್ಯಕರ್ತೆಯರು ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಭಾಗವಹಿಸಿದರು. ಡೆಂಗಿ ಜ್ವರ ನಿಯಂತ್ರಣ ನಮ್ಮೆಲ್ಲರ ಜವಾಬ್ದಾರಿ. ಡೆಂಗೆ ಜ್ವರಕ್ಕೆ ಕಾರಣವೇನು ? ಹಗಲು ಹೊತ್ತಿನಲ್ಲಿ ಕಚ್ಚುವ ಇಡಿಸ ಈಜಿಪ್ಟ್ ಸೊಳ್ಳೆಗಳಿಂದ ಡೆಂಗಿ ಜ್ವರ ಹರಡುತ್ತದೆ. ಡೆಂಗಿ ಜ್ವರ ನಿಯಂತ್ರಣಕ್ಕೆ ಏನು ಮಾಡಬೇಕು ? ಮನೆಯಲ್ಲಿನ ಸಿಮೆಂಟ್ ತೊಟ್ಟೆ, ಡ್ರಮ್, ಬ್ಯಾರೆಲ್, ಬಕೆಟ್, ಕೊಡಗಳಲಿನ ನೀರನ್ನು ಶೇಖರಿಸಿದಲ್ಲಿ ಮುಚ್ಚಿಡಿ ಹಾಗೂ ವಾರಕ್ಕೊಮ್ಮೆ ಉಜ್ಜಿ ಸ್ವಚ್ಛಗೊಳಿಸಿರಿ, ಏಕೆಂದರೆ ಸೊಳ್ಳೆಯ ಮೊಟ್ಟೆಗಳು ನೀರಿಲ್ಲದಿದ್ದರೂ ಒಂದು ವರ್ಷ ಬದುಕಿರುತ್ತವೆ. ಮನೆ, ಶಾಲೆ, ಕಾಲೇಜು, ಕಚೇರಿ, ಅಂಗನವಾಡಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಹಗಲು ಹೊತ್ತಿನಲ್ಲಿ ಇಡಿಸ್ ಈಜಿಪ್ಟ್ ಸೊಳ್ಳೆಗಳಿಂದ ರಕ್ಷಣೆ ಪಡೆಯಲು ಸ್ವಚ್ಛತೆಗೆ ಆದ್ಯತೆ ನೀಡೋಣ. ನಿಂತನೀರು ಸೊಳ್ಳೆಗಳ ಆಗರ-ನೀರು ನಿಲ್ಲದಂತೆ ಎಚ್ಚರವಹಿಸಿ. ವಾರಕ್ಕೆ ಒಂದು ದಿನ ಪ್ರತಿ ಶುಕ್ರವಾರ ಸೊಳ್ಳೆ ಉತ್ಪತ್ತಿ ತಾಣಗಳನ್ನು ನಾಶ ಮಾಡುವ ದಿನ ಎಂದು ಇಟ್ಟುಕೊಳ್ಳಿ ಎಂದು ಮಾಹಿತಿ ನೀಡಲಾಯಿತು.

## "ಗ್ಲೋಬಲ್ ಡಿಲೆ ಡೆವಲಪ್ಮೆಂಟ್ ಉಪ ಕೇಂದ್ರಗಳಲ್ಲಿ ಮೌಲ್ಯಮಾಪನ ವಿವಿಧ ಚಟುವಟಿಕೆಯ ಮೂಲಕ ಮಗುವಿನ ಪುನಶ್ಚೇತನ"



ಹುಮ್ನಾಬಾದ್ ತಾಲುಕಿನಲ್ಲಿ ಬರುವ ಹಳ್ಳಿಖೇಡ್ (ಬಿ) ಗ್ರಾಮದಲ್ಲಿ ವಿಶೇಷ ಸಹಾಯ ಅಗತ್ಯವಿರುವ ಮಗು ಫರಾತನಾಜ್, 2021ರ ನವೆಂಬರ್ 8ರಂದು ಹುಟ್ಟಿದನು. ಮೂವರು ಮಕ್ಕಳಲ್ಲಿ ಕಿರಿಯನಾದ ಫರಾತನಾಜ್, ಗ್ಲೋಬಲ್ ಡೆವಲಪ್‌ಮೆಂಟ್ ಡಿಲೇ (Global Development Delay) ಎಂಬ ಬೆಳವಣಿಗೆ ತೊಂದರೆಯೊಂದಿಗೆ ಬದುಕನ್ನು ಆರಂಭಿಸಿದ್ದನು. ಈ ತೊಂದರೆ ಅನೇಕ ಅಂಗಚಲನೆ ಮತ್ತು ಸಂವಹನ ಸಮಸ್ಯೆಗಳನ್ನು ಉಂಟುಮಾಡುತ್ತದೆ. ಮಗುವಿಗೆ ಮಾತಿನ ಸಮಸ್ಯೆಯಿದ್ದರೂ, ಕುಳಿತುಕೊಳ್ಳಲು, ನಡಿಗೆಯಾಡಲು ಮತ್ತು ನಿತ್ಯದ ಚಟುವಟಿಕೆಗಳನ್ನು ಮಾಡಲು ಸಾಧ್ಯವಾಗುತ್ತಿರಲಿಲ್ಲ. ತಾಯಿ ಅರಶಿಯಾ ಬೇಗಂ ಗೃಹಿಣಿ ಹಾಗೂ ತಂದೆ ಎಂ.ಡಿ. ಜಕರ್ ಲಾರಿ ಚಾಲಕರಾಗಿದ್ದಾರೆ. ಕುಟುಂಬದ ಆರ್ಥಿಕ ಸ್ಥಿತಿ ದುರಸ್ತಿಯಾಗಿಲ್ಲ. ಬಡತನ ಮತ್ತು ಹಿಂದುಳಿದ ಪರಿಸ್ಥಿತಿಗಳ ಮಧ್ಯೆ, ಮಗುವಿನ ಆರೋಗ್ಯ ಕಾಳಜಿಯ ವಿಚಾರದಲ್ಲಿ ಅವರು ತೀವ್ರ ಚಿಂತೆಗೆ ಒಳಗಾದರು. ಮಗುವಿಗೆ ಹುಟ್ಟಿದಾಗ ಅತ್ತಿರಲಿಲ್ಲ ಮತ್ತು ವೈದ್ಯಕೀಯ ತುರ್ತುಸಹಾಯಕ್ಕಾಗಿ ಸುಮಾರು ಒಂದು ತಿಂಗಳು ಆಸ್ಪತ್ರೆಯಲ್ಲಿ ಕಳೆಯಬೇಕಾಯಿತು. ಮಗುವಿನ ಬೆಳವಣಿಗೆ ಸಾಮಾನ್ಯ ಶಿಶುಗಳ ಹೋಲಿಕೆಗೆ ತೀರಾ ವೇಗವಿಲ್ಲದೆ ನಡೆಯುತ್ತಿದ್ದಾಗ, ಅಂಗನವಾಡಿ ಕಾರ್ಯಕರ್ತೆಯವರು ಮಗುವಿನಲ್ಲಿ ಉಂಟಾಗಿರುವ ವಿಶೇಷ ಅಗತ್ಯಗಳನ್ನು ಗುರುತಿಸಿದರು. ನಂತರ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರು ಮಗುವಿನ ಸಂಪೂರ್ಣ ಮೌಲ್ಯಮಾಪನ ಮಾಡಿದರು. ಈ ಸಂದರ್ಭದಲ್ಲಿ ಹಲವಾರು ಸಮಸ್ಯೆಗಳು ಕಾಣಿಸಿಕೊಂಡುವು. ಮಗು ಸ್ವತಂತ್ರವಾಗಿ ಕುಳಿತುಕೊಳ್ಳಲಾರದು, ನಡಿಗೆಯ ಕಲಿಕೆ ಆಗಿಲ್ಲ, ಕೈ ಬೆರಳಿನ ಚಟುವಟಿಕೆಗಳು ನಿಯಂತ್ರಣದಲ್ಲಿಲ್ಲ, ದೃಷ್ಟಿ ಕೇಂದ್ರೀಕರಣ ಕಡಿಮೆಯಿದೆ, ಶಬ್ದಗಳ ಉಚ್ಚಾರಣೆ ಇಲ್ಲ, ಆಹಾರ ಸೇವನೆ ಕಷ್ಟಕರವಾಗಿದೆ ಮತ್ತು ಮಗು ಸಹಪಾಠಿಗಳೊಂದಿಗೆ ಬೆರೆತುಕೊಳ್ಳುವುದರಲ್ಲಿ ಅಪಾರ ತೊಂದರೆ ಅನುಭವಿಸುತ್ತಿತ್ತು.



ಈ ಎಲ್ಲ ಸಮಸ್ಯೆಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು, ಪುನಶ್ಚೇತನದ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಿಂದ ಹಸ್ತಕ್ಷೇಪ ಪ್ರಾರಂಭಿಸಲಾಯಿತು. ವಾರದಲ್ಲೆ ಮಕ್ಕಳ ಮನೆಗೆ ಭೇಟಿ ನೀಡಲಾಗುತ್ತಿದ್ದು, ಅಲ್ಲದೇ ಉಪಕೇಂದ್ರಗಳಲ್ಲಿಯೂ ಪುನಶ್ಚೇತನ ಚಟುವಟಿಕೆಗಳನ್ನು ನಿರ್ವಹಿಸಲಾಗುತ್ತಿದೆ. ಚಟುವಟಿಕೆಗಳಲ್ಲಿ ಬೆಂಬಲದಿಂದ ಕುಳಿತುಕೊಳ್ಳುವ ತರಬೇತಿ, ಚಂಡು ಹಿಡಿಯುವ ಆಟಗಳು, ಎರಡು ಶಬ್ದಗಳ ಉಚ್ಚಾರಣೆಯ ಅಭ್ಯಾಸ, ಓರೋ ಮೋಟರ್ ಚಟುವಟಿಕೆಗಳು ಹಾಗೂ ಮಕ್ಕಳೊಂದಿಗೆ ಬೆರೆಯುವ ತರಬೇತಿ ಸೇರಿವೆ. ಈ ಚಟುವಟಿಕೆಗಳು ಶರೀರಚಲನೆಯ ಜೊತೆಗೆ ಮಾತು ಮತ್ತು ಸಾಮಾಜಿಕ ಕೌಶಲ್ಯಗಳ ಬೆಳವಣಿಗೆಗೆ ಸಹಾಯಮಾಡುತ್ತವೆ. ಪುನಶ್ಚೇತನದ ಈ ನಿರಂತರ ಹಸ್ತಕ್ಷೇಪದಿಂದ ಫರಾತನಾಜ್‌ನಲ್ಲಿ ಸ್ಪಷ್ಟವಾದ ಬದಲಾವಣೆಗಳು ಕಂಡುಬಂದಿವೆ. ಮಗು ಈಗ ಸ್ವಲ್ಪಸ್ವಲ್ಪವಾಗಿ ನಡೆಯಲು ಪ್ರಾರಂಭಿಸಿದೆ, ಕೆಲವೊಂದು ಸರಳ ಶಬ್ದಗಳನ್ನು ಉಚ್ಚಾರಣೆ ಮಾಡುತ್ತಿದೆ. ಆಹಾರ ಸೇವನೆ ಸುಗಮವಾಗಿದೆ, ಇನ್ನೂ ಮುಖ್ಯವಾಗಿ, ಇತರ ಮಕ್ಕಳೊಂದಿಗೆ ಬೆರೆತು ಆಡಲು ಹಾಗೂ ಸಂವಹನ ಸಾಧಿಸಲು ಪ್ರಾರಂಭಿಸಿದ್ದಾನೆ. ಈಗ ಮಗು ತನ್ನ ಬೆರಳನ್ನು ಬಳಸಿಕೊಂಡು ವಸ್ತುಗಳನ್ನು ಹಿಡಿಯಲು ಕಲಿತಿದ್ದಾನೆ, ಅಪರಿಚಿತರಿಗೆ ಗುರುತಿಸುವ ಸಾಮರ್ಥ್ಯವೂ ಬೆಳೆದಿದೆ. ಇವತ್ತಿಗೆ ಫರಾತನಾಜ್‌ಗೆ ಪೌಷ್ಟಿಕ ಆಹಾರ ವ್ಯವಸ್ಥೆ ಕಲ್ಪಿಸಲಾಗಿದೆ ಮತ್ತು UDID (Unique Disability ID) ಕಾರ್ಡ್ ಕೂಡ ಮಾಡಿಕೊಡಲಾಗಿದೆ. ಈ ಪ್ರಗತಿಯಾದ ಬೆಳವಣಿಗೆ ಮಗುವಿನ ಭವಿಷ್ಯವನ್ನು ಬೆಳಗಿಸುವತ್ತ ಹೆಜ್ಜೆ ಹಾಕಿಸುತ್ತಿದ್ದು, ಅವರ ಕುಟುಂಬಕ್ಕೆ ಹೊಸ ಆಶಾಕಿರಣವಾಗಿಯೇ ಪರಿಣಮಿಸಿದೆ. ಆದ್ದರಿಂದ ಆರ್ಬಿಟ್ ಸಂಸ್ಥೆಗು ಹಾಗೂ ಕಾರ್ಯಕರ್ತರಿಗು ಧನ್ಯಬಾದಗಳು ಸಲ್ಲಿಸಿದ್ದಾರೆ.

## "ಮಹಿಳಾ ಸಬಲೀಕರಣ ಕಾರ್ಯಕ್ರಮ"

### "ಮಹಿಳೆಯರು ಸಮರ್ಥ ನಾಯಕರಾಗಿ ಹೊರಹೊಮ್ಮಬೇಕು"



ಹುಮ್ನಾಬಾದ್ ತಾಲೂಕಿನ ಕಪ್ಪರಗಾವ್ ಗ್ರಾಮದಲ್ಲಿ ದಿನಾಂಕ 12 ಆಗಸ್ಟ 2025ರಂದು ಆರ್ಬಿಟ ಸಂಸ್ಥೆ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತೆಯಾದ ಶ್ರೀಮತಿ ಸವಿತಾ ರವರು ಗಾಂಧಿ ಮಹಾಸಂಗದ ಅಡಿಯಲ್ಲಿ ಬರುವ ರಮಾಬಾಯಿ ಸಂಘದ ಮಹಿಳೆಯರಿಗೆ ಯೋಜನೆಯ ಗುರಿ ಉದ್ದೇಶಗಳ ಕುರಿತು ವಿವರಣೆಯನ್ನು ನೀಡಿದರು. ಮಹಿಳೆಯರು ಸಮರ್ಥ ನಾಯಕರಾಗಿ ಹೊರಹೊಮ್ಮಬೇಕು ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ, ತಾಂತ್ರಿಕ ಹಾಗೂ ಪರಿಸರದಲ್ಲಿ ಮಹಿಳೆಯರು ಮತ್ತು ಅವರ ಕುಟುಂಬದವರು ಬೆಳೆದು ಮುಂದೆ ಬರಬೇಕು. ಹಾಗೂ ಕುಟುಂಬ ಮತ್ತು ಸಮುದಾಯಗಳಲ್ಲಿ ಗಂಡು–ಹೆಣ್ಣು ಭೇದಭಾವ ಮಾಡದೆ ಸಮಾನತೆಯನ್ನು ಕಾಣಬೇಕು ಹಾಗೂ ಮಹಾಸಂಗದ ಮೂಲಕ ತಮಗೆ ಬೇಕಾಗಿರುವ ಮೂಲಭೂತ ಸೌಕರ್ಯಗಳನ್ನು ಸಂಘಟನೆಯ ಮೂಲಕ ಒದಗಿಸಿಕೊಳ್ಳುವಲ್ಲಿ ಪ್ರಯತ್ನಿಸಬೇಕು. ಹಾಗೂ ಸಶಕ್ತರಾಗಿ ಮಹಿಳೆಯರು ಬೆಳೆಯಬೇಕೆಂದು ತಿಳಿಸಲಾಯಿತು. 10 ಸದಸ್ಯರು ಸಭೆಯಲ್ಲಿ ಭಾಗವಹಿಸಿ ಯೋಜನೆಯ ಗುರಿ ಉದ್ದೇಶಗಳ ಮಹತ್ವದ ಕುರಿತು ಮಾಹಿತಿಯನ್ನು ಪಡೆದುಕೊಂಡರು.

## "ಉಚಿತ ಕ್ಯಾನ್ಸರ್ ಮತ್ತು ಕಣ್ಣಿನ ತಪಾಸಣೆ ಶಿಬಿರ"




ಆರ್ಬಿಟ್ ಸಂಸ್ಥೆ ಹುಮನಾಬಾದ್, ಇಂಡಿಯನ್ ಕ್ಯಾನ್ಸರ್ ಸುಸೈಟಿ ಗುಲ್ಬರ್ಗ ಮತ್ತು ಸೈಲೆನ್ಸ್ ಆಸ್ಪತ್ರೆ ಬೀದರ್ ಇವರ ಸಂಯುಕ್ತ ಆಶ್ರಯದಲ್ಲಿ ಭಾಲ್ಕಿ ತಾಲೂಕಿನ ದಾಡಗಿ ಗ್ರಾಮದ ವಿದ್ಯಾಭಾರತಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ "ಉಚಿತ ಕ್ಯಾನ್ಸರ್ ಮತ್ತು ಕಣ್ಣಿನ ತಪಾಸಣೆ" ಶಿಬಿರವನ್ನು ಆಯೋಜಿಸಲಾಯಿತು. ಬೆಳಿಗೆ 11 ಘಂಟೆಗೆ ಶಿಬಿರವನ್ನು ಶ್ರೀಮತಿ ಸುಜಾತ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತೆ ರವರ ಪ್ರಾರ್ಥನೆ ಗೀತೆಯೊಂದಿಗೆ ಪ್ರಾರಂಭಿಸಲಾಯಿತು. ಸುಮಾರು 33 ವರ್ಷಗಳಿಂದ ಅರ್ಬಿಟ್ ಸಂಸ್ಥೆಯು ಸಮಾಜ ಸೇವೆಯನ್ನು ಮಾಡುತ್ತಾ ಬಂದಿದೆ. ಮಾನಸಿಕ ಅಸ್ವಸ್ಥತೆಯ, ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಹಾಗೂ ಮಹಿಳಾ ಸಬಲೀಕರಣ ಇತರೆ



ಸಮಾಜ ಸೇವೆಯಲ್ಲಿ ತೊಡಗಿ ಅವರ ಜೀವನಮಟ್ಟವನ್ನು ಸುಧಾರಿಸುವಲ್ಲಿ ಹಾಗೂ ಸರಕಾರದ ಸವಲತ್ತುಗಳನ್ನು ಸಮಾಜದ ಜನರಿಗೆ ಒದಗಿಸುವಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಇತ್ತೀಚಿನ ದಿನಗಳಲ್ಲಿ ಕ್ಯಾನ್ಸರ್ ಎನ್ನುವ ಮಹರೋಗವು ಜನರಲ್ಲಿ ಕಂಡು ಬರುತಿದೆ. ಅನೇಕ ಜನರು ಕ್ಯಾನ್ಸರ್ ರೋಗವನ್ನು ತಿಳಿಯಲಾರದೆ ತುತ್ತಾಗುತ್ತಿದ್ದಾರೆ. ಅದಕ್ಕಾಗಿ ಈ ಶಿಬಿರವನ್ನು ಆಯೋಗಿಸಲಾಗಿದೆ. ಈ ಶಿಬಿರದ ಸದುಪಯೋಗ ಪಡೆದುಕೊಳ್ಳಿ ಎಂದು ಸೊಂಯೋಜಕರಾದ ಶ್ರೀ ಯೋಹಾನ್ ರವರು ಪ್ರಾಸ್ತಾವಿಕ ನುಡಿಯನ್ನು ನುಡಿದರು. ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಜಿಲ್ಲಾ ಸೋಯೋಜಕಾರದ ಶ್ರೀ ಗುರುರಾಜ ಕುಲಕರ್ಣಿ ಅವರು ಕ್ಯಾನ್ಸರ್ ಲಕ್ಷಣಗಳ ಬಗ್ಗೆ ಹಾಗೂ ಅದರಿಂದಾಗುವ ದುರುಪಯೋಗಗಳ ಬಗ್ಗೆ ಜನರಿಗೆ ತಿಳಿಸಿದರು. ದಾಡಗಿ ಗ್ರಾಮದ 60 ಜನರು ಕ್ಯಾನ್ಸರ್ ತಪಾಸಣೆ ಮಾಡಿಸಿಕೊಂಡರು. ಹಾಗೂ 24 ಜನರು ಕಣ್ಣಿನ ತಪಾಸಣೆ ಮಾಡಿಸಿಕೊಂಡರು. ಗ್ರಾಮದ ಜನರು ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಶಾಲೆಯ ಮುಖ್ಯ ಗುರುಗಳು, ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಸಿಬ್ಬಂದಿಗಳು, ಅರ್ಬಿಟ್ ಸೋಸ್ಥೆಯ ಸಿಬ್ಬಂದಿಗಳು ಈ ಶಿಬಿರದಲ್ಲಿ ಉಪಸ್ಥಿತರಿದ್ದರು. ಕೊನೆಯದಾಗಿ ಶ್ರೀ ಪ್ರಭು ಮಹಿಳಾ ಸಬಲೀಕರಣದ ಕಾರ್ಯಕರ್ತರ ವೊಂದನರ್ಪನೆಯೊಂದಿಗೆ ಅಂದಿನ ಶಿಬಿರವನ್ನು ಮುಕ್ತಾಯ ಮಾಡಲಾಯಿತು.



## "ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ"




8 ಆಗಸ್ಟ 2025ರಂದು ಹುಮ್ನಾಬಾದ್ ತಾಲೂಕಿನ ಹುಡುಗಿ ಗ್ರಾಮದ ಪ್ರೇಮಾಂಜಲಿ ಮಹಾಸಂಗದ ಮಹಿಳೆಯರಿಗೆ ಶ್ರೀಮತಿ ಸವಿತಾ ರವರು ಕ್ಯಾನ್ಸರ್ ದಿಂದ ಆಗುವ ದುಷ್ಪರಿಣಾಮಗಳ ಕುರಿತು ಮಾಹಿತಿ ನಿಡಿದರು. ಕ್ಯಾನ್ಸರ್ ರೋಗಕ್ಕೆ ನಿರ್ದಿಷ್ಟ ಕಾರಣಗಳನ್ನು ಗುರುತಿಸಲು ಸಾಧ್ಯವಾಗದಿದ್ದರೂ ಹಲವು ಕಾರಣಗಳು ಸೇರಿ ಕ್ಯಾನ್ಸರ್ ಸಂಭವಿಸುತ್ತದೆ. ಕ್ಯಾನ್ಸರ್ ದೇಹದ ಯಾವುದೇ ಭಾಗದಿಂದ ಬರಬಹುದು. ಮುಖ್ಯವಾಗಿ ಶ್ವಾಸಕೋಶ, ಸ್ತ್ರೀಯರಲ್ಲಿ ರಕ್ತ ಶ್ರವ ಮತ್ತು ಸ್ತನ ಹಾಗೂ ಗರ್ಭಕೋಶದ ಕ್ಯಾನ್ಸರ್ ಹೆಚ್ಚಾಗಿ ಬರುತ್ತದೆ. ಕ್ಯಾನ್ಸರ್‌ನ ವಿಧಗಳು ಎಂದರೆ ಗಂಟಲು ಕ್ಯಾನ್ಸರ್, ಚರ್ಮ ಕ್ಯಾನ್ಸರ್, ಜಠರ ಕ್ಯಾನ್ಸರ್, ಮೂಳೆ ಕ್ಯಾನ್ಸರ್ ಹಾಗೂ ಥೈರಾಯ್ಡ್ ಕ್ಯಾನ್ಸರ್. ರೋಗದ ಸೂಚನೆಗಳು ಅಂದರೆ. ರಕ್ತ ಕೆಮ್ಮುವುದು, ಕಾಲಕಾಲಕ್ಕೆ ಬಾಯಿ ಅಥವಾ ನಾಲಿಗೆಗೆ ಹುಣ್ಣು ಆಗುವುದು, ಮೂತ್ರ ಮಾಡುವಾಗ ರಕ್ತ ಕಾಣಿಸಿಕೊಳ್ಳುವುದು, ತೂಕದಲ್ಲಿ ಇಳಿಕೆ ಹಾಗೂ ರಾತ್ರಿ ಬೆವರುವುದು ಹೀಗೆ ಸೂಚನೆಗಳನ್ನು ಕಾಣುತ್ತವೆ ಎಂದು ಸದಸ್ಯರಿಗೆ ಮಾಹಿತಿ ನೀಡಿದರು. ಒಟ್ಟು 10 ಸದಸ್ಯರು ಇದರ ಸದುಪಯೋಗವನ್ನು ಪಡೆದುಕೊಂಡರು.

## "ವ್ಯಕ್ತಿತ್ವ ವಿಕಾಸನದ ಕುರಿತು ತರಬೇತಿ"



18 ಆಗಸ್ಟ್ 2025ರಂದು ಕ್ರಾಸ್ ಸಂಸ್ಥೆ ಬೆಂಗಳೂರಿನಲ್ಲಿ ವ್ಯಕ್ತಿತ್ವ ವಿಕಾಸನದ ಕುರಿತು ತರಬೇತಿಯನ್ನು ಹಮ್ಮಿಕೊಂಡಿದ್ದರು. ಈ ತರಬೇತಿಯಲ್ಲಿ ಕ್ರಾಸ್ ಸಂಸ್ಥೆಯ 14 ಸಹಭಾಗಿ ಸಂಸ್ಥೆಗಳ ಸಿಬ್ಬಂದಿ ವರ್ಗದವರು ಭಾಗವಹಿಸಿದರು. ವ್ಯಕ್ತಿತ್ವ ವಿಕಾಸನ ಎಂದರೆ ನಮ್ಮ ವ್ಯಕ್ತಿತ್ವದಲ್ಲಿ ಅಭಿವೃದ್ಧಿ ಹೊಂದುವುದು ಎಂದು ತಿಳಿಸಿದರು. ವ್ಯಕ್ತಿ ವಿಕಾಸನ ಹೊಂದಬೇಕಾದರೆ ಸುಖದ ವಾತಾವರಣವನ್ನು ಹುಡುಕಬಾರದು ನನ್ನ ಹತ್ತಿರ ಏನೂ ಇಲ್ಲ ಎನ್ನುವ ಧೈರ್ಯದೊಂದಿಗೆ ಜೀವನ ಸಾಗಿಸಬೇಕು ಅಂದಾಗ ಮಾತ್ರ ಸೃಜನಶೀಲನಾಗುತ್ತಾನೆ ಎಂಬುದರ ಕುರಿತು ಸಂಪನ್ಮೂಲ ವ್ಯಕ್ತಿಗಳು ತಿಳಿಸಿದರು. ಈ ತರಬೇತಿಯಲ್ಲಿ 14 ಸಹಭಾಗಿ ಸಂಸ್ಥೆಯವರು ಹಾಗೂ ಕ್ರಾಸ್ ಸಂಸ್ಥೆಯ ಸಿಬ್ಬಂದಿ ವರ್ಗದವರು ಭಾಗವಹಿಸಿ ಪ್ರತಿದಿನವೂ ನಮ್ಮನ್ನು ನಾವೇ ದೃಢಪಡಿಸಿಕೊಳ್ಳಬೇಕು ಎಂಬುದರ ಕುರಿತು ತಿಳಿದುಕೊಳ್ಳಲಾಯಿತು. ಹಾಗೆ ಎರಡು ದಿನದ ಪುನರ್ಮನ ಸಭೆಯಲ್ಲಿ ಭಾಗವಹಿಸಿ ನಾಲ್ಕು ತಿಂಗಳ ಕಾರ್ಯಸಾಧನೆಯ ವರದಿಯನ್ನು ಮಂಡನೆ ಮಾಡಲಾಯಿತು.



## “ಮಹಾಸಂಗದ ಸದಸ್ಯರಿಗೆ ಸಂಪನ್ಮೂಲ ಕ್ರೂಢೀಕರಣದ ಕುರಿತು ತರಬೇತಿ”




11 ಆಗಸ್ಟ್ 2025ರಂದು ಮನ್ನಾಏಖೇಳಿ ಗ್ರಾಮದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಮಹಾಸಂಗದ ಸದಸ್ಯರಿಗೆ ಸಂಪನ್ಮೂಲ ಕ್ರೂಢೀಕರಣದ ಕುರಿತು ತರಬೇತಿ ನೀಡಲಾಯಿತು. ಈ ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಅರುಣ್‌ಕುಮಾರ್ ಕೋಟೆ ಅವರು ಆಗಮಿಸಿದ್ದರು. ಮುಖ್ಯವಾಗಿ ಆರ್ಥಿಕ ಸಂಪನ್ಮೂಲದ ನಿರ್ವಹಣೆ ಹಾಗೂ ಕ್ರೂಢೀಕರಣ ಜೊತೆಗೆ ಮಹಿಳಾ ಶಿಕ್ಷಣ ಹಾಗೂ ಲಿಂಗ ಸಮಾನತೆಯ ಕುರಿತು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಮಹಿಳಾ ಅಭಿವೃದ್ಧಿ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಅಮಿತಾ ಹಾಗೂ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಅರುಣ್‌ಕುಮಾರ್ ಎಸ್ ಅವರು ಭಾಗವಹಿಸಿದರು. ಒಟ್ಟು 22 ಜನ ಮಹಿಳೆಯರು ಭಾಗವಹಿಸುವ ಮೂಲಕ ಸಂಪನ್ಮೂಲ ಕ್ರೂಢೀಕರಣದ ಕುರಿತು ಮಾಹಿತಿ ಪಡೆದುಕೊಂಡರು.

## “ಉಚಿತ ಕಾನೂನು ಸೇವೆ ಕುರಿತು ತರಬೇತಿ”



12 ಆಗಸ್ಟ್ 2025ರಂದು ಬಾಲ್ಕಿ ತಾಲೂಕಿನ ಧನ್ನೂರ ಗ್ರಾಮದಲ್ಲಿ ಇರುವ ಎಸ್ತಾರ ಮತ್ತು ಮೇರಿ ಸ್ವ-ಸಹಾಯ ಸಂಘದ ಸದಸ್ಯರಿಗೆ ಸಮಾಜ ಕಾರ್ಯಕರ್ತರಾದ ಶ್ರೀ ಪ್ರಭು ಅವರು ಉಚಿತ ಕಾನೂನು ಸೇವೆ ಕುರಿತು ತರಬೇತಿಯನ್ನು ಕೊಡಲಾಯಿತು. ಉಚಿತ ಕಾನೂನು ಸೇವೆ ಎಂದರೆ ನಮಗೆ ಉಚಿತವಾಗಿ ಸಿಗುವಂತ ಕಾನೂನು ಸೇವೆ ಎಂದು ಹೇಳಬಹುದು. ಈ ಕಾನೂನು ಸೇವೆ ಉಪಯೋಗಿಸಿಕೊಳ್ಳಲು ಕೆಲವು ನೇಮಗಳನ್ನು ನಾವು ತಿಳಿದುಕೊಳ್ಳೋಣ. ಮುಖ್ಯವಾಗಿ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಮತ್ತು ಪರಿಶಿಷ್ಟ ಜಾತಿ ಜನರಿಗೆ ಹಾಗೂ ಕಾರ್ಖಾನೆಯಲ್ಲಿ ಕೆಲಸ ಮಾಡುವವರಿಗೆ ಮತ್ತು ಗುಂಪು ಘರ್ಷಣೆ ಗಲಭೆಗೆ ಅಥವಾ ಪ್ರವಾಹದಲ್ಲಿ ಸಿಲುಕಿ ತುತ್ತಾದವರಿಗೆ ಮತ್ತು ಮಾನಸಿಕ ಅಸ್ವಸ್ಥತೆಯಲ್ಲಿ ಬಳಲುತ್ತಿರುವ ಜನರಿಗೆ ಹಾಗೂ ಕನಿಷ್ಠ ವಾರ್ಷಿಕ ವರಮಾನ ಮೂರು ಲಕ್ಷಕ್ಕಿಂತ ಒಳಗೆ ಇರುವವರಿಗೆ ಈ ಉಚಿತ ಕಾನೂನು ಸೇವೆ ಪಡೆದುಕೊಳ್ಳಲು ಅರ್ಹರಾಗಿರುತ್ತಾರೆ. ಎಲ್ಲಾ ವರ್ಗದ ಜಾತಿಯ ಜನರು ಈ ಉಚಿತ ಕಾನೂನು ಸೇವೆ ಪಡೆದುಕೊಳ್ಳಬಹುದು. ತಮ್ಮ ವಾರ್ಷಿಕ ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸಿ ತದನಂತರ ಇದರ ಸದುಪಯೋಗವನ್ನು ಪಡೆದುಕೊಳ್ಳಬಹುದು ಎಂದು ಹೇಳಿದ್ದರು. ಅಂದಿನ ಸಭೆಯು ಸರಿಯಾಗಿ ಒಂದು ಗಂಟೆಗೆ ಮುಕ್ತಾಯ ಮಾಡಲಾಯಿತು ಈ ಸಭೆಯಲ್ಲಿ 32 ಸದಸ್ಯರು ಹಾಜರಾಗಿದ್ದರು.

## “ಸ್ವ-ಉದ್ಯೋಗದಲ್ಲಿ ತೊಡಗಿದ ಮಹೀಳೆ”



ಇಂದಿರಾ ಬಾಯಿ ಗಂಡ ಜಗನ್ನಾಥ್ ವಡ್ಡನ್ಕೇರಾ ಗ್ರಾಮ ನಿವಾಸಿಯಾಗಿದ್ದು. ನನಗೆ ಮೊದಲು ಸಂಘದ ಯಾವುದೇ ರೀತಿ ಅನುಭವ ಇರಲಿಲ್ಲ ಸಂಸ್ಥೆಯಿಂದ ಸಿಸ್ಟರ್ ಮತ್ತು ಕಾರ್ಯಕರ್ತರು ಬಂದು ಸಂಘವನ್ನು ರಚನೆ ಮಾಡಿದರು ಸಂಘದಲ್ಲಿ ಸೇರಿಕೊಂಡು ಸುಮಾರು 23 ವರ್ಷಗಳಾಯಿತು ಸಂಸ್ಥೆ ವತಿಯಿಂದ ಹಲವಾರು ಮಾಹಿತಿ ತರಬೇತಿಗಳನ್ನು ಪಡೆದುಕೊಂಡೆ ಸ್ವ-ಉದ್ಯೋಗ ಹೈನುಗಾರಿಕೆ ಮಹಿಳಾ ಹಕ್ಕು, ನಾಯಕತ್ವ ವಕಲತೆ ಮತ್ತು ಜಾಲಬಂದ ಇವೆಲ್ಲ ತರಬೇತಿಗಳನ್ನು ಪಡೆದುಕೊಂಡು ಸಂಘದಿಂದ 50,000 ಸಾಲವನ್ನು ಪಡೆದುಕೊಂಡು ಒಂದು ಎಮ್ಮೆ ಖರೀದಿ ಮಾಡಿದ್ದೇನೆ ಅದು ಮರಿ ಹಾಕಿತ್ತು ಪುನಃ ಮುಂದೆ ದೊಡ್ಡದಾಗಿ ಮತ್ತೊಂದು ಮರಿ ಹಾಕಿತ್ತು ಹೀಗೆ ಮೂರು ಎಮ್ಮೆಗಳಾದವು ಮತ್ತು ಸಂಘದಿಂದ 50,000 ಸಾಲ ಪಡೆದು ಎರಡು ಕುರಿಗಳನ್ನು



ಖರೀದಿಸಿದೆ ಹೀಗೆ ಅವು ಮರಿಗಳನ್ನು ಹಾಕಿ ಒಟ್ಟು ಹತ್ತು ಕುರಿಗಳು ಆಗಿವೆ ಎಮ್ಮೆಗಳು ದಿನಕ್ಕೆ ನಾಲ್ಕು ಲೀಟರ್ ಹಾಲು ಕುಡಿತಿವೆ ಈ ಹಾಲು ಸೊಸೈಟಿಗೆ ಹಾಕಿದಾಗ ದಿನಕ್ಕೆ 160 ರೂಪಾಯಿಯಂತೆ ಅಂದರೆ ವಾರಕ್ಕೆ 1,280 ಹಣ ಬರುತ್ತದೆ ತಿಂಗಳಿಗೆ 5120 ಆದಾಯ ಬರುತ್ತದೆ ಹಾಗೆ ಸದ್ಯದ ಪರಿಸ್ಥಿತಿಯಲ್ಲಿ 10 ಕುರಿಗಳು ಸಹ ಇವೆ ಇದರಿಂದ ನನ್ನ ಕುಟುಂಬಕ್ಕೆ ತುಂಬಾ ಆಧಾರವಾಗಿದೆ ನಮ್ಮ ಆರ್ಥಿಕ ಮಟ್ಟ ಸುಧಾರಿಸದೆ ಸಂಘದಿಂದ ಮತ್ತು ನೀಡಿದ ಪರಿಣಾಮವಾಗಿ ನನಗೆ ಧೈರ್ಯ ಬಂದಿದೆ ಮತ್ತು ಇವೆಲ್ಲ ಆದಾಯ ಹೆಚ್ಚಿಸಿಕೊಳ್ಳಲು ಸಹಾಯವಾಗಿದೆ ಹಾಗಾಗಿ ಆರ್ಬಿಟ್ ಸಂಸ್ಥೆಯವರಿಗೆ ನನ್ನ ಪರವಾಗಿ ನನ್ನ ಕುಟುಂಬದ ಪರವಾಗಿ ಧನ್ಯವಾದಗಳು ಸಲ್ಲಿಸುತ್ತೇನೆ.

## “ಆದರ್ಶ ಸ್ವಸಹಾಯ ಸಂಘದ ಸದಸ್ಯರಿಗೆ ಕಿಚನ್ ಗಾರ್ಡನ್ ತರಬೇತಿ”



10 ಆಗಸ್ಟ್ 2025ರಂದು ಔರಾದ್ ತಾಲೂಕು ಗುಡಪಳ್ಳಿ ಗ್ರಾಮದಲ್ಲಿ ಆದರ್ಶ ಮಹಿಳಾ ಸ್ವ-ಸಹಾಯ ಸಂಘ (SHG) ಸದಸ್ಯರಿಗೆ ಕಿಚನ್ ಗಾರ್ಡನ್ ಕುರಿತು ವಿಶೇಷ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಔರಾದ ತಾಲೂಕಿನ ಸ್ಥಳೀಯ ಸಂಯೋಜಕಿ ಸಿಸ್ಟರ್ ಲೀನಟ್ ಭಾಗವಹಿಸಿ ಮಹಿಳೆಯರಿಗೆ ಪ್ರೇರಣಾದಾಯಕ ಮಾರ್ಗದರ್ಶನ ನೀಡಿದರು. ತರಬೇತಿ ಸಂದರ್ಭದಲ್ಲಿ ಸಿಸ್ಟರ್ ಲೀನಟ್ ಅವರು ಕಿಚನ್ ಗಾರ್ಡನ್ನ ಮಹತ್ವವನ್ನು ಒತ್ತಿ ಹೇಳುತ್ತಾ, ಮನೆಯ ಸುತ್ತಮುತ್ತ ಇರುವ ಖಾಲಿ ಜಾಗವನ್ನು ಸಮರ್ಪಕವಾಗಿ ಬಳಸಿಕೊಂಡು ಹಸಿರು ತರಕಾರಿ ಬೆಳೆಗಳನ್ನು ಬೆಳೆಸುವಂತೆ ಮಹಿಳೆಯರನ್ನು ಪ್ರೇರೇಪಿಸಿದರು. ಸ್ವಂತವಾಗಿ ಬೆಳೆದ ತರಕಾರಿಗಳು ಆರೋಗ್ಯಕ್ಕೆ ಒಳ್ಳೆಯದು, ಆರ್ಥಿಕ ಭಾರವನ್ನು ಕಡಿಮೆ ಮಾಡುವುದು, ಪೌಷ್ಠಿಕಾಂಶವನ್ನು ಒದಗಿಸುವುದು ಹಾಗೂ ಕುಟುಂಬದ ಆರೋಗ್ಯವನ್ನು ಕಾಪಾಡುವುದು ಎಂಬುದನ್ನು ಅವರು ತಿಳಿಸಿದರು. ಅವರು ಮಹಿಳೆಯರಿಗೆ ಬೆಂಡೆಕಾಯಿ, ಬದನೆಕಾಯಿ, ಟೊಮ್ಯಾಟೊ, ಮೆಣಸಿನಕಾಯಿ ಮುಂತಾದ ಸುಲಭವಾಗಿ ಬೆಳೆಸಬಹುದಾದ ತರಕಾರಿಗಳ ಕುರಿತು ವಿವರಿಸಿದರು. ಜೊತೆಗೆ ಜೈವಿಕ ಗೊಬ್ಬರ ಮತ್ತು ನೈಸರ್ಗಿಕ ವಿಧಾನಗಳನ್ನು ಬಳಸಿಕೊಂಡು ಬೆಳೆ ಬೆಳೆಸುವ ಬಗ್ಗೆ ತಿಳಿಸಿ, ಪರಿಸರ ಸ್ನೇಹಿ ಜೀವನವನ್ನು ಬೆಳೆಸುವ ಮಹತ್ವವನ್ನು ಒತ್ತಿ ಹೇಳಿದರು. ಈ ತರಬೇತಿಯಿಂದ ಮಹಿಳೆಯರು ಹೆಚ್ಚು ಉತ್ಸಾಹಿತರಾಗಿ, ತಮ್ಮ ಮನೆ ಸುತ್ತಮುತ್ತಲಿನ ಜಾಗವನ್ನು ಸಮರ್ಪಕವಾಗಿ ಬಳಸಿಕೊಂಡು ತರಕಾರಿ ಬೆಳೆಸುವ ನಿರ್ಧಾರ ಕೈಗೊಂಡರು. ಒಟ್ಟು 10 ಮಂದಿ ಮಹಿಳೆಯರು ಈ ತರಬೇತಿಯಲ್ಲಿ ಭಾಗವಹಿಸಿ, ಭವಿಷ್ಯದಲ್ಲಿ ಆರೋಗ್ಯಕರ ಕುಟುಂಬ ಹಾಗೂ ಸ್ವಾವಲಂಬಿ ಜೀವನದತ್ತ ಹೆಜ್ಜೆ ಇಡುವ ಸಂಕಲ್ಪ ವ್ಯಕ್ತಪಡಿಸಿದರು.

## “ಶಾಲೆಯ ಮಕ್ಕಳಿಗೆ ಆರೋಗ್ಯ ಕುರಿತು ತರಬೇತಿ”



04 ಆಗಸ್ಟ್ 2025ರಂದು ಗುಮ್ಮ ಗ್ರಾಮದಲ್ಲಿ ಸರ್ಕಾರಿ ಶಾಲೆಯ ಮಕ್ಕಳಿಗೆ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆಯಾದ ಶ್ರೀಮತಿ ರೋಸ್ ಮರಿ ಅವರು ಶಾಲೆಯ ಮಕ್ಕಳಿಗೆ ಆರೋಗ್ಯ ಕುರಿತು ತರಬೇತಿ ನೀಡಿದರು. ಆರೋಗ್ಯವನ್ನು ಹೇಗೆ ಕಾಪಾಡಿಕೊಳ್ಳಬೇಕು ನಾವು ಆರೋಗ್ಯದಿಂದ ಇರಬೇಕಾದರೆ ಏನೇನೆಲ್ಲ ಮಾಡಬೇಕೆಂದು ತಿಳಿಸಿಕೊಟ್ಟರು. ಕೈಗಳನ್ನು ತೊಳೆದುಕೊಂಡು ಆಹಾರ ಸೇವಿಸುವುದು, ಒಳ್ಳೆಯ ಆಹಾರ ಬಿಸಿ ಆಗಿರುವ ಆಹಾರವನ್ನು ಸೇವಿಸುವುದು ಹಾಗೂ ಹಸಿ ತರಕಾರಿಗಳನ್ನು ತಿನ್ನುವುದರ ಬಗ್ಗೆ ಮಾಹಿತಿ ನೀಡಿದರು. ಪೌಷ್ಠಿಕಾಂಶವನ್ನು ಒದಗಿಸುವುದು ಹಾಗೂ ಕುಟುಂಬದ ಆರೋಗ್ಯವನ್ನು ಕಾಪಾಡುವುದು ಎಂಬುದನ್ನು ತಿಳಿಸಿದರು. ಈ ಆರೋಗ್ಯ ತರಬೇತಿಯಲ್ಲಿ 35 ಶಾಲೆಯ ಮಕ್ಕಳು ಮತ್ತು ಶಿಕ್ಷಕರು ಭಾಗವಹಿಸಿದರು.

## “ನವಜೀವನ (ಎಲ್.ಎಲ್.ಎಲ್.ಎಫ್) ಕಾರ್ಯಕ್ರಮ”

### “ಮಾನಸಿಕ ಅಸ್ವಸ್ಥರ ಹಾಗೂ ಪೋಷಕರಿಗೆ ಜಾಗೃತಿ”



ದಿನಾಂಕ 20-08-2025 ರಂದು ಭಾಲ್ಕಿ ತಾಲೂಕಿನ ಮದಕಂಟಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ, ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಕಾರ್ಯಕರ್ತೆ ಶ್ರೀಮತಿ ಕಲ್ಪನಾ ರವರು ಆರ್ಬಿಟ್ ಸಂಸ್ಥೆಯು ಮಾನಸಿಕ ಅಸ್ವಸ್ಥರ ಹಾಗೂ ಪೋಷಕರ ಜೊತೆಯಲ್ಲಿ ಕೆಲಸ ಮಾಡುತ್ತಿದೆ. ಮಾನಸಿಕ ಅಸ್ವಸ್ಥರನ್ನು ಗುರುತಿಸಿ ಮುಖ್ಯವಾಹಿನಿಗೆ ತರಲು ಶ್ರಮಿಸುತ್ತಿದೆ. ಮಾನಸಿಕ ಕಾಯಿಲೆ ಎಂದರೇನು? ಅದರ ಲಕ್ಷಣಗಳು ಏನು ಮತ್ತು ಮಾನಸಿಕ ಕಾಯಿಲೆಯ ಬಗ್ಗೆ ಜನರಿಗೆ ಇರುವ ತಪ್ಪು ಕಲ್ಪನೆಗಳ ಬಗ್ಗೆ ತಿಳಿಸಲಾಯಿತು. ಮಾನಸಿಕ ಕಾಯಿಲೆ ಅಂದರೆ ಕಿರಿಚುವುದು, ಅಳುವುದು, ಹೊಡೆಯುವುದು, ತನ್ನಷ್ಟಕ್ಕೆ ತಾನು ಮಾತನಾಡುವುದು, ಅಂತವರು ನಿಮ್ಮ ಗಮನಕ್ಕೆ ಬಂದರೆ ನಮ್ಮ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿ ತಿಳಿಸುವುದು. ಮಾನಸಿಕ ಅಸಸ್ಥ ಕಾಯಿಲೆಯಿಂದ ಬಳಲುತ್ತಿರುವವರನ್ನು ನಾವು ಗುರುತಿಸಿ ತಾಲೂಕ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಮನೋವೈದ್ಯರಿಂದ ತಪಾಸಣೆಯನ್ನು ಮಾಡಿಸಿ, ಅವರಿಗೆ ಸತತವಾಗಿ ಚಿಕಿತ್ಸೆಯನ್ನು ಕೊಡುವುದರ ಮೂಲಕ ಅವರು ಹಂತ ಹಂತವಾಗಿ ಬದಲಾವಣೆಯನ್ನು ಕಂಡುಕೊಳ್ಳಬಹುದು. ಹೀಗೆ ಮಾಡುವುದರಿಂದ ಅವರು ಕೂಡ ಸಮಾಜದಲ್ಲಿ ನಿಮ್ಮ ನಮ್ಮ ಹಾಗೆ ಜೀವನ ಸಾಗಿಸಬಹುದು. ಹಾಗೆ ನಮ್ಮ ಆರ್ಬಿಟ್ ಸಂಸ್ಥೆಯು ಮಾನಸಿಕ ಅಸ್ವಸ್ಥತೆ ಕಾಯಿಲೆಯಿಂದ ಬಳಲುತ್ತಿರುವ ಎಷ್ಟೋ ಜನರನ್ನು ಗುಣಪಡಿಸಿದ ಯಶಸ್ವಿನ ಕಥೆಯನ್ನು ಮಾಡಲಾಗಿದೆ ಎಂದು ತಿಳಿಸಲಾಯಿತು. ಈ ಜಾಗ್ರತಿ ಕಾರ್ಯಕ್ರಮದಲ್ಲಿ ಒಟ್ಟು 15 ಜನ ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು.

## “ಸುಲ್ತಾನ್ ಪಾಲಕ ಪೋಷಕರ ಸಭೆ”



ದಿನಾಂಕ 14.08.2025ರಂದು ಬೀದರ್ ತಾಲೂಕಿನ ಸುಲ್ತಾನಪುರ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಕಾರ್ಯಕರ್ತರದ ಶ್ರೀ ಅರುಣ್ ರವರು ಸುಲ್ತಾನ್ ಎಂಬ ಪಾಲಕ ಪೋಷಕರ ಸಭೆ ಹಮ್ಮಿಕೊಳ್ಳಲಾಯಿತು. ಈ ಸಭೆಯಲ್ಲಿ ಮೊದಲು ಫಲಾನುಭವಿಗೆ ಯಾವ ರೀತಿ ಮಾತ್ರೆಗಳನ್ನು ಕೊಡುತ್ತಿದ್ದೀರಿ ಎಂಬುದರ ಬಗ್ಗೆ ಪರಿಶೀಲನೆ ಮಾಡಲಾಯಿತು. ತದನಂತರ ಸರ್ಕಾರದಿಂದ ದೊರಕುವ ಎಲ್ಲಾ ಸೌಲಭ್ಯಗಳ ಬಗ್ಗೆ ಚರ್ಚಿಸಲಾಯಿತು. ಹಾಗೆ ಯಾರಿಗೆ ಸೌಲಭ್ಯಗಳು ದೊರಕುತ್ತದೆ ಅವರಿಗೆ UDID card, pension, ಹೆಲ್ತ್ ಕಾರ್ಡ್ ನ ಸೌಲತ್ತಿನ ಬಗ್ಗೆ ಮಾಹಿತಿ ತಿಳಿಸಲಾಯಿತು. ಪ್ರತಿ ತಿಂಗಳು ಡಿ.ಎಂ.ಎಚ್.ಪಿ ಕ್ಯಾಂಪಿಗೆ ತಪ್ಪದೆ ಬಂದು ಮಾತ್ರೆಗಳನ್ನು ತೆಗೆದುಕೊಂಡು ಹೋಗುವುದು ದಿನನಿತ್ಯ ನಿಮ್ಮ ಫಲಾನುಭವಿಗಳಿಗೆ ಮಾತ್ರೆಗಳನ್ನು ಸ್ವೀಕರಿಸುವ ಹಾಗೆ ನೋಡಿಕೊಳ್ಳುವುದು ನಿಮ್ಮ ಕರ್ತವ್ಯವಾಗಿದೆ. ಇದರಿಂದ ನಿಮ್ಮ ಫಲಾನುಭವಿಗಳು ಆದಷ್ಟು ಬೇಗ ಗುಣಮುಖರಾಗುತ್ತಾರೆ ಎಂದು ತಿಳಿಸಲಾಯಿತು. ಈ ಸಭೆಯಲ್ಲಿ ಒಟ್ಟು 6 ಜನ ಭಾಗವಹಿಸಿದ್ದರು.

## “ಸೆಕ್ರೆಟ್ ಹರ್ಟ್ ಚರ್ಚ್‌ನಲ್ಲಿ ಮಾನಸಿಕ ಅಸ್ವಸ್ಥತೆಯ ಬಗ್ಗೆ ಕಾರ್ಯಕ್ರಮ”



ದಿನಾಂಕ 25.08.2025 ರಂದು ಬೀದರ್ ತಾಲೂಕಿನ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅರುಣ್ ರವರು ಬೀದರ್‌ನ ಸೆಕ್ರೆಟ್ ಹರ್ಟ್ ಚರ್ಚ್‌ನಲ್ಲಿ ಮಾನಸಿಕ ಅಸ್ವಸ್ಥತೆಯ ಬಗ್ಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಸಭೆಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಬೀದರ್ ತಾಲೂಕಿನ ಸಿಬಿಆರ್ ಆಗಿರುವ ಆನಂದ್ ಸರ್ ಅವರು ಮಾನಸಿಕ ಅಸ್ವಸ್ಥತೆ ಬಗ್ಗೆ ಜಾಗೃತಿ ಮೂಡಿಸಲಾಯಿತು. ಮಾನಸಿಕ ಅಸ್ವಸ್ಥತೆಯ ಲಕ್ಷಣಗಳು ಮತ್ತು ಮಾನಸಿಕ ಅಸ್ವಸ್ಥತೆ ಎಂದರೇನು, ಮತ್ತು ಮಾನಸಿಕ ಕಾಯಿಲೆ ಯಾವರೀತಿ ಬರುವುದು ಎಂಬುದರ ಬಗ್ಗೆ ಅನೇಕ ಮಾಹಿತಿ ತಿಳಿಸಲಾಯಿತು. ಈ ಕಾಯಿಲೆ ಒಂದು ಮೆದುಳಿನ ಕಾಯಿಲೆಯಾಗಿದ್ದು ಮೂಢನಂಬಿಕೆಗೆ ಒಳಗಾಗಿ ಹೊರಗಡೆ ತೋರಿಸುವುದಕ್ಕಿಂತ ಆದಷ್ಟು ಬೇಗ ಚಿಕಿತ್ಸೆ ತೋರಿಸುವುದು ಬಹಳ ಮುಖ್ಯ, ಚಿಕಿತ್ಸೆ ಬಗ್ಗೆ ಅರಿವು ಮೂಡಿಸಲಾಯಿತು. ಅದೇರೀತಿ ದಿನನಿತ್ಯ ಮಾತ್ರೆಗಳು ತೆಗೆದುಕೊಂಡಿದ್ದಲ್ಲಿ ಆದಷ್ಟು ಬೇಗ ಗುಣಮುಖರಾಗುವುದು. ಹಾಗೆಯೇ ಸರ್ಕಾರದ ದಾಖಲೆತೆಗಳ ಬಗ್ಗೆ ಮತ್ತು ಸರ್ಕಾರದ ಸೌಲಭ್ಯಗಳ ಬಗ್ಗೆ ಮಾಹಿತಿ ತಿಳಿಸಿ ಯಾವರೀತಿ ಸೌಲಭ್ಯಗಳು ಪಡೆದುಕೊಳ್ಳುವುದು ಎಂಬುದರ ಬಗ್ಗೆ ಚರ್ಚಿಸಲಾಯಿತು. ಈ ಸಭೆಯಲ್ಲಿ ಒಟ್ಟು 20 ಜನ ಭಾಗವಹಿಸಿದ್ದರು.

## “ಮಾನಸಿಕ ಅಸ್ವಸ್ಥತೆ ಬಗ್ಗೆ ಜಾಗೃತಿ”



ದಿನಾಂಕ: 08–08–2025 ರಂದು ಬಸವಕಲ್ಯಾಣ ತಾಲೂಕಿನ ಕಿಟ್ಟಾ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಲಿವ್.ಲವ್.ಲಾಫ್ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಗ್ರಾಮದ ಜನರಿಗೆ ಮಾನಸಿಕ ಆರೋಗ್ಯ ಹಾಗೂ ಮಾನಸಿಕ ಅಸ್ವಸ್ಥತೆಯ ಕುರಿತು ಅರಿವು ಮೂಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯಕ್ರಮದ ಆಪ್ತ ಸಮಾಲೋಚಕರಾದ ಶ್ರೀಮತಿ ರೂಪಾಲಿ ಅವರು ಭಾಗವಹಿಸಿ, ಮಾನಸಿಕ ಆರೋಗ್ಯ ಕುರಿತು ಹಾಗೂ ಕಾಯಿಲೆಯ ಲಕ್ಷಣಗಳು ಮತ್ತು ಕಾರಣಗಳ ಬಗ್ಗೆ ಮಾಹಿತಿ ನೀಡಿದರು. ವ್ಯಸನ, ಮದ್ಯಪಾನ, ಅನುವಂಶಿಕ, ಮೆದುಳಿನ ರಾಸಾಯನಿಕ ಕ್ರಿಯೆಯಲ್ಲಿ ಬದಲಾವಣೆ, ಜೀವನ ಅನುಭವಗಳು ಮತ್ತು ಪರಿಸರ ಪ್ರಭಾವಗಳು ಸೇರಿದಂತೆ ಅಂಶಗಳ ಸಂಕೀರ್ಣ ಪರಸ್ಪರ ಕ್ರಿಯೆಯಿಂದ ಮಾನಸಿಕ ಅಸ್ವಸ್ಥತೆಗಳು ಉದ್ಭವಿಸುತ್ತವೆ ಎಂದು ವಿವರಿಸಿದರು. ಆರ್ಬಿಟ್ ಸಂಸ್ಥೆಯಿಂದ ನಡೆಸುತ್ತಿರುವ ಮಾನಸಿಕ ಅರಿವಿನ ಕಾರ್ಯಕ್ರಮಗಳು ಜನರಿಗೆ ತುಂಬಾ ಉಪಯುಕ್ತವಾಗಿದ್ದು ಗ್ರಾಮದ ಜನರು ಹಾಗೂ ಪಂಚಾಯಿತಿಯ ಸದಸ್ಯರು ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಈ ಕಾರ್ಯಕ್ರಮದಲ್ಲಿ ಸುಮಾರು 15 ಜನ ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡರು.

## “ಆಶಾ ಕಾರ್ಯಕರ್ತೆಯರ ಸಹಾಯದಿಂದ ಮನೆಗಳ ಸಮೀಕ್ಷೆ”



ಮಾನಸಿಕ ಅಸ್ವಸ್ಥರನ್ನು ಪತ್ತೆ ಹಚ್ಚಿ ಅವರಿಗೆ ಜೀವನ ಕಲ್ಪಿಸುವ ನಿಟ್ಟಿನಲ್ಲಿ ಆರ್ಬಿಟ್ ಸಂಸ್ಥೆಯು ಎಲ್.ಎಲ್.ಎಲ್.ಎಫ್ ಸಂಯುಕ್ತಾಶ್ರಯದಲ್ಲಿ ಹಲಬಾರ್ಗ ಸುತ್ತಮುತ್ತಲಿನ ಹಳ್ಳಿಗಳಿಗೆ ಶ್ರೀಮತಿ ಬಸವಜ್ಯೋತಿಯವರು ಬೇಟಿ ನೀಡಿ ಆಶಾ ಕಾರ್ಯಕರ್ತೆಯರ ಸಹಾಯದಿಂದ ಮನೆಗಳ ಸಮೀಕ್ಷೆ ನಡೆಸುತ್ತಿರುವರು. ಈ ಸಮೀಕ್ಷೆಯಲ್ಲಿ ಪತ್ತೆಯಾದವರನ್ನು ಮಾನಸಿಕ ಅಸ್ವಸ್ಥರ ಶಿಬಿರಕ್ಕೆ ಒಳಪಡಿಸಿ ಅವರಿಗೆ ಚಿಕಿತ್ಸೆ ಕೊಡುವಲ್ಲಿ ಸಂಸ್ಥೆಯು ಮುಂದಾಗುತ್ತಿದೆ ಎಂದು ತಿಳಿಸಿದರು.

## “ಮಾನಸಿಕ ಅಸ್ವಸ್ಥರು ಹಾಗೂ ಆರೈಕೆದಾರರಿಗೆ ಸಪೋರ್ಟ್ ಗ್ರೂಪ್ ಮೀಟಿಂಗ್”



ದಿನಾಂಕ 07/08/2025 ರಂದು ಹುಲಸೂರು ತಾಲೂಕಿನ ಮುಚಳಂಬ ಗ್ರಾಮದಲ್ಲಿ ಸಪೋರ್ಟ್ ಗ್ರೂಪ್ ಮೀಟಿಂಗ್ ನಡೆಸಲಾಯಿತು. ಈ ಸಭೆಯಲ್ಲಿ ಮಾನಸಿಕ ಅಸ್ವಸ್ಥರು ಹಾಗೂ ಆರೈಕೆದಾರರಿಗೆ ಒತ್ತಡವನ್ನು ನಿಭಾಯಿಸುವುದು ಹೇಗೆ ಎಂಬುದರ ಬಗ್ಗೆ ತಿಳಿಸಲಾಯಿತು. ಒತ್ತಡ ಎಂದರೆ ನಮ್ಮ ತಲೆಯಲ್ಲಿ ಒಂದು ವಿಚಾರ ಇರುತ್ತದೆ ಅದು ನಿಜ ಜೀವನದಲ್ಲಿ ಈಡೇರಿಸಲು ಆಗದೆ ಇದ್ದಾಗ ಒತ್ತಡ ಉಂಟಾಗುತ್ತದೆ. ಒತ್ತಡವನ್ನು ಹೋಗಲಾಡಿಸಬೇಕೆಂದರೆ ನಮ್ಮ ನಾವು ಅಂದುಕೊಂಡಿರೋ ಕೆಲಸ ಆಗದೆ ಇದ್ದಾಗ ಅದನ್ನು ನಮ್ಮ ನಿಜ ಜೀವನದಲ್ಲಿ ಬದಲಾವಣೆಯಾಗಿ ಅಳವಡಿಸಿಕೊಳ್ಳಬೇಕು ಆಗ ಮಾತ್ರ ಒತ್ತಡವನ್ನು ನಿಭಾಯಿಸಲು ಸಾಧ್ಯವಾಗುತ್ತದೆ. ಚಿಕಿತ್ಸೆ ಮತ್ತು ಅದರ ವಿಪರ್ಯಾಸಗಳ ಬಗ್ಗೆ, ಅಂದರೆ ಮನುಷ್ಯನು ತನ್ನ ದೇಹ ಮತ್ತು ಮನಸ್ಸು ಎರಡನ್ನು ಸದೃಢವಾಗಿ ಮತ್ತು ಆರೋಗ್ಯಕರವಾಗಿರಿಸಿಕೊಳ್ಳುವುದು ಬಹಳ ಮುಖ್ಯವಾಗುತ್ತದೆ. ಯೋಗ, ಧ್ಯಾನ ಮತ್ತು ಪುಸ್ತಕಗಳನ್ನು ಓದುವುದು,ಭಾವನಾತ್ಮಕವಾಗಿ ಸದೃಢವಾಗಲು ಸಹಾಯ ಮಾಡುತ್ತದೆ. ಮಾನಸಿಕ ಆರೋಗ್ಯ ಎಂದರೆ ಮಾನಸಿಕ,ಭಾವನಾತ್ಮಕ ಮತ್ತು ಸಾಮಾಜಿಕ ಯೋಗ ಕ್ಷೇಮವನ್ನು ಒಳಗೊಂಡಿರುತ್ತದೆ. ಮಾನಸಿಕ ಅಸ್ವಸ್ಥರಿಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳಾದ ಯುಡಿಐಡಿ ಕಾರ್ಡ್ ಮತ್ತು ಮಾಸಿಕ ವೇತನವನ್ನು ಪಡೆಯಲು ಯಾರು ಅರ್ಹರು ಎಂಬುದನ್ನು ತಿಳಿಸಲಾಯಿತು.

## “ವಿಶೇಷ ಚೇತನರ ಗುಂಪು ರಚನೆ”



ದಿನಾಂಕ 22.8.2025 ರಂದು ಆರ್ಬಿಟ್ ಹಾಗೂ ಲಿವ್.ಲವ್.ಲಾಫ್ ಸಂಯುಕ್ತಾಶ್ರಯದಲ್ಲಿ ಬೀದರ್‌ನ ಸೇಕ್ರೆಡ್ ಹಾರ್ಟ್ ದೇವಾಲಯದಲ್ಲಿ ತಾಲೂಕು ಮಟ್ಟದ ಮಾನಸಿಕ ಹಾಗೂ ವಿಶೇಷ ಚೇತನರ ಗುಂಪು ರಚನೆ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಗುಣಮುಖರಾಗಿರುವ ಎಲ್ಲ ಮಾನಸಿಕ ಅಸ್ವಸ್ಥರನ್ನು ಹಾಗೂ ವಿಶೇಷ ಚೇತನರನ್ನು ಸೇರಿಸಿ ತಾಲೂಕ ಮಟ್ಟದಲ್ಲಿ ಗುಂಪು ರಚಿಸಲಾಯಿತು. ಇವರಿಗೆ ಚುನಾವಣೆ ನಡೆಸಲಾಗಿ ನವನಾಥ್ ಅಧ್ಯಕ್ಷರಾಗಿ, ಶ್ರೀದೇವಿ ಉಪಾಧ್ಯಕ್ಷರಾಗಿ ಮತ್ತು ಹಾವಪ್ಪ ಕಾರ್ಯದರ್ಶಿಗಳಾಗಿ ನೇಮಕಗೊಂಡರು. ಇವರಿಂದ ಸಸಿಗೆ ನೀರೆರೆಯುವ ಮೂಲಕ ಗುಪಿನ ಉದ್ಘಾಟನೆ ಮಾಡಲಾಯಿತು. ಈ ಒಂದು ಗುಂಪಿನಲ್ಲಿ 30 ಫಲನುಭಾವಿಗಳು ಭಾಗಿಯಾಗಿದ್ದರು.

## “ತಾಲೂಕು ಮಟ್ಟದ ವಿಶೇಷ ಚೇತನರ ಗುಂಪು ರಚನೆ”



ದಿನಾಂಕ 27.8.2025 ರಂದು ಆರ್ಬಿಟ್ ಹಾಗೂ ಲಿವ್.ಲವ್.ಲಾಫ್ ಸಂಯುಕ್ತಾಶ್ರಯದಲ್ಲಿ ಬಸವಕಲ್ಯಾಣ ತಾಲೂಕದಲ್ಲಿ ತಾಲೂಕು ಮಟ್ಟದ ವಿಶೇಷ ಚೇತನರ ಗುಂಪು ರಚನೆ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಸಹನಿರ್ದೇಶಕರು, ಯೋಜನೆಯ ವ್ಯವಸ್ಥಾಪಕರಾದ ಸಿಸ್ಟರ್. ಕ್ರಿಸ್ಟಿನಾ, ಕಾರ್ಯಕತ್ರರು ಹಾಗೂ ಫಲಾನುಭವಿಗಳು ಹಾಜರಿದ್ದರು. ಈ ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಫಾ. ಆಲ್ಬರ್ಟ್ ರವರು ಹಾಗೂ ಉದ್ದೇಶವನ್ನು ಸಿಸ್ಟರ್. ಕ್ರಿಸ್ಟಿನಾ ರವರು ತಿಳಿಸಿದರು. ಗುಣಮುಖರಾಗಿರುವ ಎಲ್ಲ ಮಾನಸಿಕ ಅಸ್ವಸ್ಥರನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಅರ್ಬಿಟ್ ಸಂಸ್ಥೆಯ ಒಂದು ಪ್ರಯತ್ನವಾಗಿದೆ ಇದಕ್ಕೆ ನೆರೆದವರೆಲ್ಲ ಸಹಕರಿಸಬೇಕಾಗಿ ಕರೆನೀಡುತ್ತಾ ಹಾಗೂ ಸಸಿಗೆ ನೀರು ತೆರೆಯುವ ಮೂಲಕ ಈ ಸಂಘಟನೆಯನ್ನು ಉದ್ಘಟಿಸಿದೆವು. ಈ ಸಂಘಟನೆಗೆ ಫಲಾನುಭವಿಗಳು ಮರುಜನ್ಮ ಎಂಬ ಹೆಸರನ್ನು ಸೂಚಿಸಿದರು. ಇದರಲ್ಲಿ ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ ಮತ್ತು ಮಾರುತಿ ಕಾರ್ಯದರ್ಶಿಗಳಾಗಿ ನೇಮಕಗೊಂಡರು. ಈ ಸಭೆಗೆ 38 ಫಲನುಭಾವಿಗಳು ಭಾಗಿ ಯಾಗಿದ್ದರು.

## “ಅಂಗನವಾಡಿ ಕಾರ್ಯಕರ್ತರಿಗೆ ಕರ್ತವ್ಯಗಳ ಕುರಿತು ಅರಿವು ಕಾರ್ಯಕ್ರಮ”



ದಿನಾಂಕ 24.8.2025 ರಂದು ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ. ಸುನಿಲ್ ಮಾನ್ಕರೆ ಅವರಿಂದ ಅಂಗನವಾಡಿ ಕಾರ್ಯಕರ್ತರಿಗೆ ಅವರ ಕರ್ತವ್ಯಗಳ ಕುರಿತು ಒಂದು ಅರಿವು ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಮೊದಲಿಗೆ ಅವರು ಅವರ ಗ್ರಾಮದಲ್ಲಿ ಸೇವಾ ಮನೋಭಾವದಿಂದ ಕಾರ್ಯ ನಿರ್ವಹಿಸುತ್ತಿರುವರೆಂದು ಪ್ರಶಂಸೆ ವ್ಯಕ್ತಪಡಿಸಿ ಅವರ ಗ್ರಾಮದಲ್ಲಿ ಮಾನಸಿಕ ಅಸ್ವಸ್ಥರನ್ನು ಕಂಡಾಗ ಅವರಿಗೆ ನೀಡಬೇಕಾದ ಮಾಹಿತಿ, ಪತ್ತೆಹಚ್ಚುವ ವಿಧಾನ, ಪರಿಶೀಲನಾ ಹಂತಗಳ ವಿವರ, ಸಂಪರ್ಕಿಸಬೇಕಾದ ವಿಳಾಸದ ಕುರಿತು ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಅಂಗನವಾಡಿ ಸಮೀಕ್ಷಕರು ಹಾಗೂ ಎಲ್ಲ ಕಾರ್ಯಕರ್ತರು ಸೇರಿ 38 ಜನರಲ್ಲಿ ಅರಿವು ಮೂಡಿಸಲಾಯಿತು.

## “ಗ್ರಾಮ ಪಂಚಾಯತ್ ಸದಸ್ಯರಿಗೆ ಜಾಗೃತಿ ಕಾರ್ಯಕ್ರಮ”



ದಿನಾಂಕ 30.8.2025 ರಂದು ಆರ್ಬಿಟ್ ಹಾಗೂ ಎಲ್.ಎಲ್.ಎಲ್.ಎಫ್ ಸಂಯುಕ್ತಾಶ್ರಯದಲ್ಲಿ ಗ್ರಾಮ ಪಂಚಾಯತ್ ಸದಸ್ಯರಿಗೆ ಜಾಗೃತಿ ಕಾರ್ಯಕ್ರಮವನ್ನು ಹಲಸೂರು ತಾಲೂಕಿನ ಗ್ರಾಮದಲ್ಲಿ ಆಯೋಜಿಸಲಾಯಿತು.ಈ ಕಾರ್ಯಮವನ್ನು ಶ್ರೀಮತಿ ಲಕ್ಷ್ಮೀ ಹಾಗೂ ಮಹದೇವ್ ರವರು ನಡೆಸಿಕೊಟ್ಟರು. ಇದರಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷರು ಹಾಗೂ ಎಲ್ಲ ಸದಸ್ಯರು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಅವರ ಗ್ರಾಮದಲ್ಲಿ ಪತ್ತೆಹಚ್ಚಲಾಗಿರುವ ಮಾನಸಿಕ ಅಸ್ವಸ್ಥರ ಅಂಕಿ ಅಂಶಗಳು, ಗ್ರಾಮದಲ್ಲಿ ಇರುವ ಕೊರತೆಗಳು ಹಾಗೂ ಪಂಚಯತ್ ನಿಂದ ಅವರಿಗೆ ಲಭಿಸಬೇಕಾದ ಸೌಲಭ್ಯಗಳ ಬಗ್ಗೆ ತಿಳಿಸಲಾಯಿತು. ಸರ್ಕಾರ ವತಿಯಿಂದ ಲಬಿಸಲಾಗುತ್ತಿರುವ ಉಚಿತ ಚಿಕಿತ್ಸೆಯ ಕುರಿತು, ಮಾಸಿಕ ವೇತನದ ಕುರಿತು ಮಾಹಿತಿ ನೀಡಿ ಅವರ ಸಹಕಾರವನ್ನು ನೀಡಬೇಕಾಗಿ ತಿಳಿಸಲಾಯಿತು.

## “ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ”



ದಿನಾಂಕ 05–08–2025 ರಂದು ಬೀದರ್ ತಾಲೂಕಿನ ಚಾಂಬೋಳ್ ಗ್ರಾಮದಲ್ಲಿ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಆರ್ಬಿಟ್ ಸಂಸ್ಥೆ ಹಾಗೂ ಲೀವ್.ಲವ್.ಲಾಫ್ ಫೌಂಡೇಶನ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ನೋಹಾನ್ ರವರು ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿಯನ್ನು ಮೂಡಿಸಿದರು. ಗ್ರಾಮದಲ್ಲಿರುವ ಜನರಿಗೆ ಮಾನಸಿಕ ಆರೋಗ್ಯದ ಕುರಿತು ಹಾಗೂ ಮಾನಸಿಕ ಕಾಯಿಲೆಯ ಬಗ್ಗೆ ಸಂಕ್ಷಿಪ್ತವಾಗಿ ಮಾಹಿತಿಯನ್ನು ನೀಡಲಾಯಿತು. ಮಾನಸಿಕ ಕಾಯಿಲೆಯಿಂದ ಎಲ್ಲರೂ ಬಳಲುತ್ತಿರುತ್ತೇವೆ ಆದರೆ ಕೆಲವರು ಹೆಚ್ಚಿನ ಪ್ರಮಾಣದಲ್ಲಿ ಮಾನಸಿಕ ಅಸ್ವಸ್ಥತೆಗೆ ಒಳಗಾಗಿರುತ್ತಾರೆ. ಪ್ರತಿಯೊಬ್ಬರಿಗೂ ಜೀವಿಸುವ ಹಕ್ಕಿದೆ ಅದೇ ಮೇರೆಗೆ ನಮ್ಮ ಸಮಾಜದಲ್ಲಿ ಮಾನಸಿಕ ಅಸ್ವಸ್ಥತೆಯಿಂದ ನರಳುವವರಿಗೆ ಆ ಹಕ್ಕನ್ನು ನಾವು ಕಲ್ಪಿಸಬೇಕಾಗಿದೆ. ಸರ್ಕಾರವು ತನ್ನದೇಅದ ರೀತಿಯಲ್ಲಿ ವಿಶೇಷವಾಗಿ ಉಚಿತ ತಪಾಸಣೆ, ಉಚಿತ ಔಷಧಿ ಅವರ ಸಂರಕ್ಷಣೆಗಾಗಿ ವಿವಿಧ ಕಾಯಿದೆಗಳನ್ನು ಜಾರಿಗೊಳಿಸಿ ಅವರನ್ನು ಸಾಮಾನ್ಯ ಮನುಷ್ಯರಾಗಿ ಬದುಕಲು ಮಾರ್ಗವನ್ನು ಕಲ್ಪಿಸುತ್ತಿದೆ. ಈ ಪ್ರಯತ್ನದಲ್ಲಿ ಆರ್ಬಿಟ್ ಸಂಸ್ಥೆಯು ಅನೇಕ ಯೋಜನೆಗಳ ಮೂಲಕ ಸುಮಾರು 2000 ಮಾನಸಿಕ ಅಸ್ವಸ್ಥರನ್ನು ಪತ್ತೆ ಹಚ್ಚಿ ಅವರಿಗೆ ಜೀವಿಸುವ ಹಕ್ಕನ್ನು ಪಡೆದುಕೊಡುವಲ್ಲಿ ಮುಂದಾಗಿದೆ. ಈ ಸಾಮಾಜಿಕ ಕಳಕಳಿಯ ಕಾರ್ಯದಲ್ಲಿ ಸಾರ್ವಜನಿಕರಾಗಿ ನಮ್ಮ ಪಾತ್ರವೇನು? ಅಂಥವರನ್ನು ಗೌರವಿಸುವುದು, ಅವರ ಜೊತೆ ಬೆರೆತು ಅವರ ಕಷ್ಟದಲ್ಲಿ ಸಾಂತ್ವನ ನೀಡುವುದು, ಅವರನ್ನು ಪ್ರೀತಿಯಿಂದ ಕಾಣುವುದು. ಇದರ ಮೂಲಕ ನಾವು ಅವರ ಬಾಳಿಗೆ ಬೆಳಕಾಗಬಹುದು ಎಂದು ತಿಳಿಸಲಾಯಿತು. ಇದನ್ನು ಚಿಕಿತ್ಸೆಯ ಮೂಲಕವಾಗಿ ಗುಣಪಡಿಸಬಹುದು ಆದರೆ ಇತ್ತೀಚಿನ ದಿನಗಳಲ್ಲಿ ಜನರು ಈ ಕಾಯಿಲೆಯನ್ನು ತಮ್ಮೊಳಗೆ ಇಟ್ಟುಕೊಂಡು ಸರಿಯಾದ ಚಿಕಿತ್ಸೆಯನ್ನು ಪಡೆದುಕೊಳ್ಳದೆ ದಿನದಿಂದ ದಿನಕ್ಕೆ ಅಧಿಕವಾಗಿ ಮಾನಸಿಕವಾಗಿ ಬಳಲುತ್ತಿದ್ದಾರೆ. ಮಾನಸಿಕವಾಗಿ ಬಳಲುತ್ತಿರುವ ಜನರಿಗೆ ಉಚಿತ ತಪಾಸಣೆ ಮತ್ತು ಉಚಿತ ಚಿಕಿತ್ಸೆಯನ್ನು ನೀಡಲಾಗುತ್ತದೆ. 9036664271 ಈ ಒಂದು ಸಹಾಯವಾಣಿಗೆ ಕರೆ ಮಾಡುವುದರ ಮೂಲಕ ಸೂಕ್ತ ಮಾರ್ಗದರ್ಶನ ಪಡೆಯಬಹುದು ಎಂದು ಜನರಿಗೆ ಜಾಗೃತಿಯನ್ನು ಮೂಡಿಸಲಾಯಿತು. ಈ ಒಂದು ಜಾಗೃತಿ ಕಾರ್ಯಕ್ರಮದಲ್ಲಿ ಒಟ್ಟು 13 ಜನರು ಭಾಗವಹಿಸಿದರು.

## “ವಿಕಲಚೇತನರ ಸಭೆ ಸರ್ಕಾರದ ಸೌಲಭ್ಯಗಳು ಹಾಗೂ ಅವುಗಳ ಅನುಸ್ಟಾನತೆಯ”




ದಿನಾಂಕ 13.8.2025ರಂದು ಬೀದರ್ ತಾಲೂಕಿನ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅರುಣ್ ರವರಿಂದ ಹಮಿಲಾಪುರ ಗ್ರಾಮದಲ್ಲಿ ವಿಕಲಚೇತನರ ಸಭೆ ನಡೆಸಲಾಯಿತು. ಈ ಸಭೆಯಲ್ಲಿ ಒಟ್ಟು ಆರು ಜನ ಭಾಗವಹಿಸಿದ್ದು ಇವರಿಗೆ ಲಭ್ಯವಾಗಿರುವ ಸರ್ಕಾರದ ಸೌಲಭ್ಯಗಳು ಹಾಗೂ ಅವುಗಳ ಅನುಸ್ಟಾನತೆಯ ಬಗ್ಗೆ ಚರ್ಚಿಸಲಾಯಿತು. ವಿಕಲಚೇತನರ ಹಕ್ಕು ಮತ್ತು ರಕ್ಷಣೆಗಳ ವಿವರ ನೀಡಿದರು. ಅವರು ಎದುರಿಸುತ್ತಿರುವ ಸವಾಲುಗಳ ಕುರಿತು ಹಾಗೂ ಅದನ್ನು ಎದುರಿಸುವ ಮಾರ್ಗಗಳ ಕುರಿತು ಮಾಹಿತಿ ನೀಡಲಾಯಿತು. ಆರ್ಬಿಟ್ ಸಂಸ್ಥೆಯು ಇಂಥಹ ಸಭೆಗಳ ಮೂಲಕ ವಿಕಲಚೇತನರು ವಿಶೇಷ ಚೇತನರನ್ನಾಗಿಸಲು ಇಚ್ಚಿಸುತ್ತದೆ ಎನ್ನುತ್ತಾ ಸಭೆಯ ಪ್ರಾಮುಖ್ಯತೆಯನ್ನು ತಿಳಿಸಲಾಯಿತು. ಹಾಗೆ ಉದ್ಯೋಗ ಖಾತ್ರಿಯಲ್ಲಿ ತೊಡಗುವ ಮಾಹಿತಿಯನ್ನು ಅವರಿಗೆ ತಿಳಿಸಿ ಶುಭ ಹಾರೈಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

## “14416 ಕರೆಯ ಮೂಲಕ NIMHANS ಆಪ್ತ ಸಮಾಲೋಚನೆ”



ದಿನಾಂಕ 10.8.2025 ರಂದು ಔರಾದ್ ತಾಲೂಕಿನ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ. ಯೋಹನ್ ರವರು ನೊಂದಂತ ಮಾನಸಿಕ ಅಸ್ವಸ್ಥ ಫಲಾನುಭವಿಗಳಿಗೆ ಬೇಟಿ ನೀಡಿ 14416 ಕರೆಯ ಮೂಲಕ NIMHANS ಆಪ್ತ ಸಮಾಲೋಚನೆ ಮಾಡಿಸಲಾಯಿತು. ಕಳೆದ ವಾರದಿಂದ ಮಾನಸಿಕ ಅಸ್ವಸ್ಥರ ಆರೈಕೆದಾರರು ಬೇಸರಗೊಂಡು ಹತಾಶೆಯಿಂದ ಜೀವನವನ್ನು ಕೊನೆಗೊಳಿಸಬೇಕೆನ್ನುವ ಆಲೋಚನೆಯನ್ನು ಅರಿತು ಅವರಿಗೆ ನೀಡಿದ ಸಮಾಲೋಚನೆಯ ಮೂಲಕ ಅವರು ಆ ಯೋಚನೆಯಿಂದ ದೂರವಾಗಿ ಈಗ ಸುಗಮವಾಗಿ ಜೀವನ ನಡೆಸುತ್ತಿದ್ದಾರೆ. ಈ ಸಮಾಲೋಚನೆಯು ಮುಂದಿನ ದಿನಗಳಲ್ಲಿ ಮುಂದುವರೆದು ಅವರು ತಮ್ಮ ಹತಾಶೆಯಿಂದ ಹೊರ ಬರಲು ಸಹಾಯಕ ವಾಗುವಂತೆ ಯೋಜನೆಯನ್ನು ರೂಪಿಸಲಾಗಿದೆ.

## “ಉಚಿತ ಚಿಕಿತ್ಸೆಯಿಂದ ಕಷ್ಟದ ಜೀವನಕ್ಕೆ ಉತ್ತಮ ಬೆಳಕಿನ ಆಧಾರ”



ದಿನಾಂಕ 8/08/2025 ರಂದು ಬಸವಕಲ್ಯಾಣ ತಾಲೂಕಿನ ಹಿಮ್ಮತನಗರದ ಜಯಶೀಲ ಎಂಬುವವರು ಮೂರು ವರ್ಷದಿಂದ ಮಾನಸಿಕ ಅಸ್ವಸ್ಥತೆಗೆ ಒಳಗಾಗಿದ್ದು. ಅವರು ನಮ್ಮ ಆರ್ಬಿಟ್ ಸಂಸ್ಥೆಯ ಮುಖಾಂತರ ಉಚಿತ ಚಿಕಿತ್ಸೆಯನ್ನು ಪಡೆದುಕೊಳ್ಳಲು ಆರಂಬಿಸಿದರು ಅವರ ಜೀವನದಲ್ಲಿ ಬೆಳಕಂಡು ಕಂಡಿದ್ದಾರೆ. ಅದರ ಜೊತೆಗೆ ಸಾಮಾಜಿಕ ಭದ್ರತಾ ಯೋಜನೆಗಳಾದ ಯುಡಿಐಡಿ ಕಾರ್ಡ್, ಆರೋಗ್ಯ ಕಾರ್ಡ್ ಮತ್ತು ಮಾಸಿಕ ವೇತನ ಪಡೆದುಕೊಂಡಿದ್ದಾರೆ. ಪ್ರತಿಯೊಂದು ಹೆಜ್ಜೆಯಲ್ಲೂ ತಮ್ಮ ಜೊತೆಗಿದ್ದು ಮುನ್ನಡೆಸುತ್ತಿರುವ ಆರ್ಬಿಟ್ ಸಂಸ್ಥೆಗೆ ಧನ್ಯವಾದಗಳನ್ನು ಸಲ್ಲಿಸಿದ್ದಾರೆ ಹಾಗೂ ಸಂಸ್ಥೆಯ ಸರ್ವರಿಗೆ ಶುಭ ಹಾರೈಸಿದ್ದಾರೆ.

# ಸೇವಾ ಸಂಗಮ ಸಂಸ್ಥೆ, ಕಲಬುರಗಿ

## “ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕುರಿತು ಜಾಗೃತಿ ಕಾರ್ಯಕ್ರಮ”



ಕಲಬುರ್ಗಿ ನಗರಪ್ರದೇಶದಲ್ಲಿ ಬರುವಂತಹ ತಾರಾಫೈಲ್ ಯೇರಿಯಾ ಅಂಗನವಾಡಿ ಕೇಂದ್ರ 6ರಲ್ಲಿ ಆಗಸ್ಟ್ 20 ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಡೇಶನ್, ಕಲಬುರ್ಗಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಕುರಿತು ಮಾಹಿತಿಯನ್ನು ಕು. ಅನಿತಾಅವರು ನೀಡಿದರು. ಬೆಳವಣಿಗೆಯಲ್ಲಿ ಕುಂಟಿತವಿರುವ ಮಕ್ಕಳ ಅಂದರೆ ಹೇಗೆ ಇರುತ್ತಾರೆ. ಆ ಮಕ್ಕಳ ನ್ಯೂನತ್ತೆ ಕಾರಣಗಳ ಬಗ್ಗೆ ಹಾಗೂ ಅವರಿಗೆ ಸೇವಾಸಂಗಮ ಸಂಸ್ಥೆಯಿಂದ ಹಾಗೂ ಸರ್ಕಾರದಿಂದ ಸಿಗುವಂತಹ ಸೌಲಭ್ಯಗಳನ್ನು ದೊರಕಿಸುವಲ್ಲಿ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ 10 ಜನ ಭಾಗವಹಿಸಿದ್ದರು. ಅಂಗನವಾಡಿ ಕಾರ್ಯಕರ್ತೆ ಶ್ರೀಮತಿ ವಿಜಯಲಕ್ಷ್ಮಿ ಉಪಸ್ಥಿತರಿದ್ದರು.

## “ಟೆಂಟ್ ಹೌಸ್ ಅರಿವು ಕಾರ್ಯಕ್ರಮ”



11 ಆಗಸ್ಟ್ 2025 ರಂದು ಸೇವಾಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮಜಿ ಫೌಂಡೇಶನ ಕಲ್ಬುರ್ಗಿ ಇವರ ಸಂಯೋಗದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಯೋಜನೆಯ ಅಡಿಯಲ್ಲಿ ಟೆಂಟ್ ಹೌಸ್ ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಅಂದರೆ ಬೆಳವಣಿಗೆಯಲ್ಲಿ ಕುಂಟಿತ ವಿರುವಂತಹ ಮಕ್ಕಳನ್ನು ಗುರುತಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಯೋಜನೆಯ ಕುರಿತು ಜನರಲ್ಲಿ ಅರಿವು ಮೂಡಿಸಲಾಯಿತು. ಅಂತಹ ಮಕ್ಕಳು ಇದ್ದರೆ ಅದರಲ್ಲಿ ಇರುವ ನಂಬರ್ಗೆ ಕರೆಮಾಡಿ ಎಂದು ತಿಳಿಸಲಾಗಿದೆ ಕಾರ್ಯಕ್ರಮವು ಕಲಬುರಗಿ ನಗರದ ಶ್ರೀ ಶರಬಸವೇಶ್ವರ ದೇವಸ್ಥಾನದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಶ್ರೀಮತಿ ಶಿವಕಾಂತ, ಶ್ರೀಮತಿ ವಿಜಯಲಕ್ಷ್ಮಿ ಕುಮಾರಿ ಅನಿತಾ, ಶ್ರೀ ರಾಜಕುಮಾರ ಅವರು ಕಾರ್ಯಕ್ರಮ ನಡೆಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ 230 ಜನ ಇದರ ಸದುಪಯೋಗ ಪಡೆದುಕೊಂಡರು.

## “ಪರಿಸರವೇ ನಮ್ಮ ಮನೆ! ನಾವು ವಾಸಿಸುವ ಸ್ಥಳವಿದು”



ಕಲಬುರ್ಗಿ ನಗರ ಪ್ರದೇಶದಲ್ಲಿ ಬರುವಂತಹ ತಾರಾಫೈಲ್ ಯೇರಿಯಾ ಅಂಗನವಾಡಿ ಕೇಂದ್ರ 6ರಲ್ಲಿ ಹಾಗೂ ಅಂಬಿಕಾ ನಗರ ಅಂಗನವಾಡಿ ಕೇಂದ್ರ 2 ರಲ್ಲಿ ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಡೇಶನ ವತಿಯಿಂದ ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಪರಿಸರವೇ ನಮ್ಮ ಮನೆ. ನಾವು ವಾಸಿಸುವ ಸ್ಥಳವಿದು. ವಾಸ್ತವವಾಗಿ ಇದು ಜೀವನಕ್ಕೆ ಅತ್ಯಂತ ಅಗತ್ಯವಾದ ಅವಶ್ಯಕತೆಯಾಗಿದೆ. ನಾವು ಪರಿಸರವನ್ನು ರಕ್ಷಿಸಬೇಕು. ನಮ್ಮ ಪರಿಸರವು ನಾವು ತಿನ್ನುವ ಆಹಾರದ ಪ್ರಮುಖ ಮೂಲವಾಗಿದೆ. ಧಾನ್ಯಗಳು, ಹಣ್ಣುಗಳು, ತರಕಾರಿಗಳು ಇತ್ಯಾದಿಗಳವರೆಗೆ ಎಲ್ಲವೂ ಪರಿಸರದಲ್ಲಿ ಉತ್ಪತ್ತಿಯಾಗುತ್ತದೆ. ಪರಿಸರವು ನಮಗೆ ಜೀವನಕ್ಕೆ ಅಗತ್ಯವಾದ ಎರಡು ಪ್ರಮುಖ ಅಂಶಗಳನ್ನು ನೀಡುತ್ತದೆ–ಗಾಳಿ ಮತ್ತು ನೀರು. ನಮಗೆಲ್ಲರಿಗೂ ಬದುಕಲು ಗಾಳಿಬೇಕು, ಅದು ಪ್ರಾಣಿಗಳು, ಸಸ್ಯಗಳು ಅಥವಾ ಜಲಚರಗಳಿಗೆ ಆಮ್ಲಜನಕ ಮತ್ತು ತಾಜಾ ಗಾಳಿಯ ಅಗತ್ಯವಿರುತ್ತದೆ. ನಾವು ನಮ್ಮ ಪರಿಸರವನ್ನು ಹಾಳುಮಾಡಿದರೆ, ನಾವು ನಮ್ಮದೇ ಆದ ಶುದ್ಧಗಾಳಿ ಮತ್ತು ನೀರಿನ ಪೂರೈಕೆಯನ್ನು ಕಡಿತಗೊಳಿಸುತ್ತೇವೆ. ಈ ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆ ಶ್ರೀಮತಿ. ವಿಜಯಲಕ್ಷ್ಮಿ, ಶ್ರೀಮತಿ ಅನ್ನಪೂರ್ಣ ಹಾಗೂ 10 ಜನ ಉಪಸ್ಥಿತರಿದ್ದರು.

## “ಅಂಗನವಾಡಿ ಕೇಂದ್ರದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ”



22 ಆಗಸ್ಟ್ 2025ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಇಕ್ಬಾಲ್ ಕಾಲೋನಿ ಅಂಗನವಾಡಿ ಕೇಂದ್ರದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಅಡಿಯಲ್ಲಿ 0 ದಿಂದ 6 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಟಿತವಿರುವ ಮಕ್ಕಳನ್ನು ಹೇಗೆ ಗುರುತಿಸಬೇಕು. ಗುರ್ತಿಸಿದ ನಂತರ ಮಕ್ಕಳಿಗೆ ವಿವಿಧ ಚಟುವಟಿಕೆ ಮಾಡುವದರ ಮುಖಾಂತರ ಅವರಲ್ಲಿರುವ ನ್ಯೂನ್ಯತೆಯ ತೀವ್ರತೆಯನ್ನು ಹಂತಹಂತವಾಗಿ ಕಡಿಮೆ ಮಾಡಬಹುದು. ಇಂತಹ ಮಕ್ಕಳಿಗೆ ಸರಕಾರದಿಂದ ವಿವಿಧ ಸೌಲಭ್ಯಗಳನ್ನು ದೊರೆಯುತ್ತವೆಂದು ಶ್ರೀಮತಿ ಶಿವಕಾಂತ ಅವರು ಮಾಹಿತಿ ತಿಳಿಸಿದರು. . ನಂತರ ಅಂಗನವಾಡಿ ಮೇಲ್ವಿಚಾರಕಿಯಾದ ಮಲ್ಲಮ್ಮ ಅವರು ಸಸಿ ನಡುವುದರ ಮೂಲಕ ಕಾಡಿನ ಹಸಿರು ನಮ್ಮೆಲ್ಲರ ಉಸಿರು ಪರಿಸರ ಸರಕ್ಷಣೆ ಬಹಳ ಮುಖ್ಯವಾಗಿದೆ ಎಂದು ಪರಿಸರದ ಬಗ್ಗೆ ಮಾಹಿತಿ ತಿಳಿಸಿದರು. 20 ಜನ ಅಂಗನವಾಡಿ ಕಾರ್ಯಕರ್ತರು ಭಾಗವಹಿಸಿದರು.

## “ಸರಕಾರದಿಂದ ಸಿಗುವ ವಿವಿಧ ಸೌಲಭ್ಯಗಳು”



20 ಆಗಸ್ಟ್ 2025ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಡೇಶನ ಇವರ ಸಂಯುಕ್ತ ಆಶ್ರಯದಲ್ಲಿ ವಿದ್ಯಾನಗರ ಅಂಗನವಾಡಿ ಕೇಂದ್ರದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಅಡಿಯಲ್ಲಿ 0 ದಿಂದ 6 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಟಿತ ವಿರುವ ಮಕ್ಕಳನ್ನು ಹೇಗೆ ಗುರುತಿಸಬೇಕು. ಗುರ್ತಿಸಿದ ನಂತರ ಮಕ್ಕಳಿಗೆ ವಿವಿಧ ಚಟುವಟಿಕೆ ಮಾಡುವದರ ಮುಖಾಂತರ ಅವರಲ್ಲಿರುವ ನ್ಯೂನ್ಯತೆಯ ತೀವ್ರತೆಯನ್ನು ಹಂತ–ಹಂತವಾಗಿ ಕಡಿಮೆ ಮಾಡಬಹುದು ಇಂತಹ ಮಕ್ಕಳಿಗೆ ಸರಕಾರದಿಂದ ಸಿಗುವ ವಿವಿಧ ಸೌಲಭ್ಯಗಳನ್ನು ದೊರೆಯುತ್ತವೆ ಶ್ರೀಮತಿ ಶಿವಕಾಂತಅವರು ಮಾಹಿತಿ ನೀಡಿದರು. ಈ ಒಂದು ಮಾಹಿತಿ ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆಯಾದ ಶ್ರೀಮತಿ ಶರಣಮ್ಮ ಹಾಗೂ 18 ಜನ ಮಹಿಳೆಯರು ಭಾಗವಹಿಸಿದರು.

## “ಟೆಂಟ್ ಅವೇರ್ನೆಸ್ ಕಾರ್ಯಕ್ರಮ”



8 ಆಗಸ್ಟ್ 7 2025ರಂದು ಸೇವಾಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮಜಿ ಫೌಂಡೇಶನ್ನ ಸಂಯೋಗದಲ್ಲಿ ಕಲಬುರ್ಗಿ ತಾಲೂಕಿನ ಹುಣಸಿನಹಡಗಿ ಗ್ರಾಮದ ಶ್ರೀ ಪ್ರಭುಲಿಂಗ ಜಾತ್ರಾ ಮಹೋತ್ಸವದಲ್ಲಿ ಟೆಂಟ್ ಅವೇರ್ನೆಸ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. 0–6 ವರ್ಷದೊಳಗಿನ ಮಗುವಿನಲ್ಲಿ ಮೂರು ತಿಂಗಳಿಗೆ ಕತ್ತು ನಿಲ್ಲದಿರುವುದು ಆರು ತಿಂಗಳಿಗೆ ಹೊರಳಾಡುವುದು ಕುಳಿತು ಕೊಳ್ಳಬೇಕು ಅಂದರೆ ಒಂದು ವರ್ಷದಲ್ಲಿ ಮಗು ಚೆನ್ನಾಗಿ ನಡೆಯಬೇಕು ಹಾಗೂ ಮೂರು ವರ್ಷದಲ್ಲಿ ಮಗು ಚೆನ್ನಾಗಿ ಮಾತನಾಡಬೇಕು ಒಂದು ವೇಳೆ ಮಾತನಾಡದಿದ್ದರೆ ಮಗು ಬೆಳವಣಿಗೆಯಲ್ಲಿ ಕುಂಟಿತಹೊಂದಿದೆ ಎಂದು ತಿಳಿದುಬರುತ್ತದೆ. ಈ ಮೇಲಿನ ಎಲ್ಲ ಲಕ್ಷಣಗಳು ಕಂಡುಬಂದರೆ ಕರಪತ್ರದ ಮೇಲೆ ಇರುವ ನಂಬರಿಗೆ ಫೋನ್ಮಾಡಿ ತಿಳಿಸಿರಿ ಎಂದು ಕರಪತ್ರ ನೀಡುವುದರ ಮೂಲಕ ಕುಮಾರಿ ಲಕ್ಷ್ಮಿ ಅವರು 40 ಜನ ಗ್ರಾಮಸ್ಥರಿಗೆ ಅರಿವು ಮೂಡಿಸಿದರು.

## "ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ. ಬೆಳವಣಿಗೆಯಲ್ಲಿ ಕುಂಠಿತ ಇರುವ ಮಕ್ಕಳ ಜಾಗೃತಿ"



21 ಆಗಸ್ಟ್ 2025ರಂದು ಕಲ್ಬುರ್ಗಿ ಜಿಲ್ಲೆಯಲ್ಲಿ ಬರುವ ನಂದಿ ಸಿರ್ನು ಗ್ರಾಮದಲ್ಲಿ ಬರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ. ಸೇವಾಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ, ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿ ಕಶಿಕ್ಷಣ ಯೋಜನೆ ತರಬೇತಿಯ ಕುರಿತು 7 ಮತ್ತು 8 ತರಗತಿ ವಿದ್ಯಾರ್ಥಿಗಳಿಗೆ ಬೆಳವಣಿಗೆಯಲ್ಲಿ ಕುಂಠಿತ ಇರುವ ಮಕ್ಕಳು ಯಾವಯಾವ ರೀತಿಯಾಗಿ ಇರುವರು ಎಂದರೆ ಮಗು ಹುಟ್ಟಿದ ತಕ್ಷಣ ಅಳಬೇಕು ಇಲ್ಲವಾದರೆ ಮಗುವಿನ ಬೆಳವಣಿಗೆಯಲ್ಲಿ ಕುಂಟಿತಗೊಳ್ಳುವುದು, ಮೂರು ತಿಂಗಳಲ್ಲಿ ಮಗುವಿನ ಕತ್ತು ನಿಲ್ಲಬೇಕು, 9 ತಿಂಗಳಿಗೆ ಮಗು ಕುಳಿತುಕೊಳ್ಳಬೇಕು ಮತ್ತು ಅಂಬೆಗಾಲು ಹಾಕಬೇಕು ಒಂದು ವರ್ಷದಲ್ಲಿ ಮಗು ಯಾರ ಸಹಾಯ ವಿಲ್ಲದೆ ನಡೆಯುವುದನ್ನು ಕಲಿಯಬೇಕು, ಎರಡು ವರ್ಷದಲ್ಲಿ ಮಗು ಸಂಪೂರ್ಣವಾಗಿ ಮನೆಯವರ ಹೆಸರುಗಳನ್ನು ಹೇಳಬೇಕು ಮತ್ತು ಮನೆಯ ವಾತಾವರಣಕ್ಕೆ ಮಗು ಹೊಂದಿಕೊಳ್ಳಬೇಕು, ಮೂರು ವರ್ಷಕ್ಕೆ ಮಗು ಅಂಗನವಾಡಿ ಕೇಂದ್ರಕ್ಕೆ ಹೋಗಬೇಕು ಎಲ್ಲ ಮಕ್ಕಳ ಜೊತೆ ಸಾಮಾಜಿಕವಾಗಿ ಹೊಂದಿಕೊಳ್ಳಬೇಕು, ಆರು ವರ್ಷದಲ್ಲಿ ಮಗು ಶಾಲೆಗೆ ಹೋಗಿ ಅಕ್ಷರ ಜ್ಞಾನ ಪಡೆದುಕೊಳ್ಳಬೇಕು. ಈ ಎಲ್ಲಾ ಮೇಲಿನ ಅಂಶಗಳು ಒಂದುವೇಳೆ ಮಗುವಿನಲ್ಲಿ ಕಂಡು ಬಾರದೆ ಹೋದರೆ ಮಗುವಿನ ಬೆಳವಣಿಗೆ ಹಂತದಲ್ಲಿ ಕುಂಟಿತಗೊಂಡಿದೆ ಎಂದು ತಿಳಿದುಕೊಳ್ಳಬೇಕು. ಎಂದು ಸೇವಾಸಂಗಮ ಸಂಸ್ಥೆಯ ಕಾರ್ಯಕರ್ತೆಯಾದ ಶ್ರೀಮತಿ ದಾಕ್ಷಾಯಣಿಯವರು ವಿದ್ಯಾರ್ಥಿಗಳಿಗೆ ಮಕ್ಕಳ ಬಗ್ಗೆ ಮಾಹಿತಿ ನೀಡಿದ್ದರು. ಈ ಒಂದು ಕಾರ್ಯಕ್ರಮದಲ್ಲಿ ಒಟ್ಟು 40 ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## "ಗರ್ಭಿಣಿ ಮತ್ತು ಬಾಣತಿ ಮಹಿಳೆಯರಿಗೆ ಪೌಷ್ಠಿಕ ಆಹಾರದ ಕುರಿತು ಜಾಗೃತಿ ಕಾರ್ಯಕ್ರಮ"



ಕಲಬುರಗಿ ತಾಲ್ಲೂಕಿನಲ್ಲಿ ಬರುವ ಹಾಗರ ಗುಂಡಗಿ ಗ್ರಾಮದ ಪ್ರಾಥಮಿಕ ಉಪ ಕೇಂದ್ರದಲ್ಲಿ ಸೇವಾಸಂಗಮ ಸಂಸ್ಥೆ ಕಲಬುರಗಿ ಇವರ ವತಿಯಿಂದ ಗರ್ಭಿಣಿ ಮತ್ತು ಬಾಣತಿ ಮಹಿಳೆಯರಿಗೆ ಪೌಷ್ಠಿಕ ಆಹಾರದ ಕುರಿತು ಜಾಗೃತಿ ಕಾರ್ಯಕ್ರಮವನ್ನು 28 ಆಗಸ್ಟ್ 2025 ರಂದು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಶ್ರೀ ರಾಜಕುಮಾರ ಕಾರ್ಯಕರ್ತರು ಸೇವಾಸಂಗಮ ಸಂಸ್ಥೆ ಕಲಬುರಗಿ, ಇವರು ಮಾತನಾಡಿ ಪ್ರತಿಯೊಬ್ಬ ಹೆಣ್ಣು ಮಗಳು ಪ್ರತಿದಿನ ತಮ್ಮ ಆಹಾರದಲ್ಲಿ ಉತ್ತಮವಾದ ಪೌಂಷ್ಠಿಕಾಂಶಯುಳ ಆಹಾರವನ್ನು ಸೇವನೆ ಮಾಡಬೆಕು. ಇಲ್ಲವಾದಲ್ಲಿ ತಮ್ಮ ಆರೋಗ್ಯದ ಮೇಲೆ ಅಡ್ಡ ಪರಿಣಾಮ ಬಿರುತ್ತದೆ. ಹಾಗೂ ತಮಗೆ ಜನಿಸುವ ಮಗು ಅಪೌಷ್ಠಿಕತೆಯಿಂದ ಬಳಲುತ್ತದೆ. ಉತ್ತಮವಾದ ಆಹಾರವನ್ನು ಸೇವನೆ ಮಾಡಿ ಎಂದು ಹೇಳಿದರು. ಈ ಕಾರ್ಯಕರಮದಲ್ಲಿ 10 ಜನ ಮಹಿಳೆಯರು ಭಾಗವಹಿಸಿದರು.

## "ಮೂರು ವರ್ಷದ ಮೌಲ್ಯಮಾಪನ ಸಭೆ"



ಆಗಸ್ಟ್ 04 ಮತ್ತು 05 ರಂದು ಕಲಬುರಗಿ ನಗರದ ಸೇವಾಸಂಗಮ ಸಂಸ್ಥೆಯಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಮೂರು ವರ್ಷದ ಮೌಲ್ಯಮಾಪನ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಸಭೆಯಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತು ್ತಆರಂಭಿಕ ಶಿಕ್ಷಣ ಯೋಜನೆಯ ಮೌಲ್ಯಮಾಪಕರಾಗಿ ಅಜೀಂ ಪ್ರೇಂಜಿ ಫೌಂಡೇಶನ್ ಕಲ್ಯಾಣ ಕರ್ನಾಟಕ ವಲಯದ ಜಿಲ್ಲಾ ಸಂಯೋಜಕರಾದ ಶ್ರೀ ಸಂಜೀವಕು ಲಕರ್ಣಿ ಇವರು ಯೋಜನೆಯ ಮೂಲಕ ಮೂರು ವರ್ಷದಲ್ಲಿ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಅಭಿವೃದ್ಧಿಗಾಗಿ ನಿರ್ವಹಿಸಿದ ಕಾರ್ಯದ ವರದಿಯನ್ನು ಪಿಪಿಟಿ ಮೂಲಕ ವೀಕ್ಷಣೆ ಮಾಡಿದರು. ತದನಂತರ ಯೋಜನೆಯ ಅಡಿಯಲ್ಲಿ ಬರುವ ಗ್ರಾಮಗಳಿಗೆ ಭೇಟಿಮಾಡಿ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಮನೆ ಭೇಟಿಮಾಡುವ ಮೂಲಕ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಉತ್ತೇಜಕ ಚಟುವಟಿಕೆಯನ್ನು ಪಡೆಯುವ ಮೂಲಕ ಅವರಲ್ಲಿಯಾದ ಬದಲಾವಣೆಯನ್ನು ವೀಕ್ಷಿಸಿ ಆ ಮಕ್ಕಳ ಪಾಲಕರ ಅಭಿಪ್ರಾಯವನ್ನು ಆಲಿಸಿದರು. ಈ ಮೌಲ್ಯಮಾಪನ ಸಭೆಯಲ್ಲಿ ಸೇವಾಸಂಗಮ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್, ಫಾದರ್ ಅನೀಲ್ ಕ್ರಾಸ್ತಾ, ಸಹ ನಿರ್ದೇಶಕರಾದ ಫಾದ ರ್ ದೀಪಕ ಇವರು ವೇದಿಕೆಯಲ್ಲಿ ಉಪಸ್ಥಿತರಿದರು. ಸಭೆಯಲ್ಲಿ ಯೋಜನಾ ವೆವಸ್ಥಪಕರಾದ ಶ್ರೀಮತಿ ಶ್ವೇತಾ ಇವರು ಪಿಪಿಟಿ ಮೂಲಕ ಮೂರು ವರ್ಷದ ವರದಿಯನ್ನು ಪ್ರಸ್ತುತ ಪಡಿಸಿದರು. ಸಭೆಯಲ್ಲಿ ಸಿಸ್ಟರ್, ವೀರ ಮತ್ತು ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಕಾರ್ಯಕರ್ತರು ಭಾಗವಹಿಸಿದರು.



## “ಸಾಕ್ಯಾ ಸಂಸ್ಥೆಯಿಂದ 3 ದಿನಗಳ ತರಬೇತಿ ಕಾರ್ಯಗಾರ”




ಆಗಸ್ಟ್ 1 ರಿಂದ 7 2025ರಂದು ಸೇವಾಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮಜಿ ಅವರ ಸಂಯೋಗದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಅಡಿಯಲ್ಲಿ 3 ದಿನಗಳ ತರಬೇತಿ ಆಯೋಜಿಸಲಾಗಿದ್ದು. ಅದರಲ್ಲಿ ಇಂದು 5ನೇ ದಿನದ ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದಂತ ಸಾಕ್ಯಾ ಸಂಸ್ಥೆಯಿಂದ ಶ್ರೀಮತಿ ನೇತ್ರ ಅವರು ಹುಟ್ಟಿನಿಂದ 0–6 ವರ್ಷದ ಒಳಗಿನ ಮಕ್ಕಳಿಗೆ ಬೆಳವಣಿಗೆಯಲಿ ಕುಂಟಿತ ವಿರುವ ಮಕ್ಕಳಿಗೆ ನಾವು ಯಾವರೀತಿ ಚಟುವಟಿಕೆ ಮಾಡಬೇಕು ಹಾಗೂ ಮಕ್ಕಳ ಬಗ್ಗೆ ವಿಶ್ಲೇಷಣೆ ಮಾಡಿ ವಿವರವಾಗಿ ತಿಳಿಸಿಕೊಟ್ಟರು. ಚೇತನ ಕೇಂದ್ರದಲ್ಲಿ ಇರುವಂತಹ ವಸ್ತುಗಳನ್ನು ಬಳಸಿಕೊಂಡು ಮಗುವಿಗೆ ಯಾವರೀತಿಯಲ್ಲಿ ಚಟುವಟಿಕೆ ಮಾಡಿಸಬೇಕು ಎಂಬುದರ ಕುರಿತು ಸಿಬ್ಬಂದಿ ವರ್ಗದವರಿಗೆ ಮಗುವಿಗೆ ತರಬೇತಿಯನ್ನು ನೀಡಿದರು. ಹಾಗೂ ಮಗುವಿನ ಬೆಳವಣಿಗೆ ಹಂತಗಳು ಬಗ್ಗೆ ಕಾರ್ಯಕರ್ತರಿಗೆ ವಿವರವಾಗಿ ತಿಳಿಸಿಕೊಟ್ಟರು. ಸಂಯೋಜಕರು ಮತ್ತು ಸಿಬ್ಬಂದಿವರ್ಗದವರು ಭಾಗವಹಿಸಿದ್ದರು. ಈ ತರಬೇತಿಯ ಸದುಪಯೋಗ ಪಡೆದುಕೊಂಡರು. ಒಟ್ಟು 8 ಜನ ಉಪಸ್ಥಿತರಿದ್ದರು.

## “ಸಮೃದ್ಧಿ ಯೋಜನೆಯಿಂದ ಸಹಾಯ ಹಾಗೂ ಸೆಲ್ಕೋಸೋಲಾ ಕರ್ಂಪನಿಂದ ರೊಟ್ಟಿ ಮಾಡುವ ಯಂತ್ರ”



21 ಅಗಸ್ಟ್ 2025ರಂದು ಕಲ್ಬುರ್ಗಿ ಜಿಲ್ಲೆಯಲ್ಲಿ ಬರುವ ಫಾರ್ತಬಾದ್ ಗ್ರಾಮಕ್ಕೆ ಸೇವಾಸಂಗಮ ಸಂಸ್ಥೆಯಿಂದ ಮಹಿಳಾ ಸಬಲೀಕರಣ ಕಾರ್ಯಕ್ರಮದ ಸಂಯೋಜಕೀಯದ ಶ್ರೀಮತಿ ಇಂದುರವರು ಶ್ರೀಮತಿ ಶಕುಂತಲಾ ರವರ ಭೇಟಿ ಮಾಡಲಾಯಿತು ಇವರು ಮನೆಯಲ್ಲಿ ರೊಟ್ಟಿ ಕೇಂದ್ರವನ್ನಿಟ್ಟು ರೊಟ್ಟಿ ಮಾರಾಟವನ್ನು ಮಾಡುತ್ತಿದ್ದರು. ನಾನು ಅವರ ಮನೆಭೇಟಿ ಮಾಡಿ ಅವರ ಹಿನ್ನೆಲೆಯನ್ನು ತಿಳಿದುಕೊಂಡು ಸೆಲ್ಕೋಸೋಲಾ ಕರ್ಂಪನಿ ಇಂದ ಸಿಗುವಂತ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಲಾಯಿತು. ಸೆಲ್ಕೋಸೋಲಾ ಕರ್ಂಪನಿಯ ಕಾರ್ಯಕರ್ತಿಯಾದ ಶ್ರೀಮತಿ ಭಾಗ್ಯಶ್ರೀರವರಿಗೆ ಶಕುಂತಲಾ ಅವರ ಮನೆಭೇಟಿಮಾಡಿಸಿ ಸೆಲ್ಕೋಸೋಲಾ ಕರ್ಂಪನಿ ಯೋಜನೆಗಳ ಬಗ್ಗೆ ಮಾಹಿತಿ ನೀಡಿಸಲಾಯಿತು ಸಂತೆ ಮೂಲಕ ಮಾಹಿತಿಯನ್ನು ಪಡೆದುಕೊಂಡು ಉಮಾ ರವರು ಮಾಹಿತಿ ಪಡೆದುಕೊಂಡು ಸಬ್ಸಿಡಿ ಮೂಲಕ ರೊಟ್ಟಿ ಮಾಡುವ ಯಂತ್ರವನ್ನು ಅದರಬೆಲೆ 1,80,000 ಸಾರೂಪಾಯಿ. ಶ್ರೀಮತಿ ಶಕುಂತಲ ರವರಿಗೆ 75,000 ರೂಪಾಯಿ ಸಬ್ಸಿಡಿ ಮೂಲಕ ಸೆಲ್ಕೋಸೋಲಾ ಕರ್ಂಪನಿಯಿಂದ ರೊಟ್ಟಿ ಮಾಡುವ ಯಂತ್ರವನ್ನು ಕೊಡಿಸಲಾಯಿತು. ಇವರು ತಿಂಗಳಿಗೆ 3000 ಸಾರೂಪಾಯಿಂದ 4000 ಸಾರೂಪಯಿ ಲಾಭವನ್ನು ಪಡೆದುಕೊಳ್ಳುತ್ತಿದ್ದಾರೆ ಎಂದು ತಿಳಿಸಿದರು. ಅದಕ್ಕಾಗಿ ಸೇವಾಸಂಗಮ ಸಂಸ್ಥೆಹೆ ಹಾಗೂ ಸೆಲ್ಕೋಸೋಲಾ ಕರ್ಂಪನಿಯ ಧನ್ಯವಾದಗಳು ಸಲ್ಲಿಸಿರುತ್ತರೆ.



## “ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಆರ್ಬಿಟ್ ಸಂಸ್ಥೆ ಮತ್ತು ಸೇವಾ ಸಂಘಮ ಸಂಸ್ಥೆ ಕಾರ್ಯಕ್ರಮಗಳು”

# ಆರ್ಬಿಟ್ ಸಂಸ್ಥೆಯಲ್ಲಿ ರಕ್ತದಾನ ಶಿಬಿರ



ಹುಮನಾಬಾದ: ಪಟ್ಟಣದ ಹೊರವಲಯದಲ್ಲಿರುವ ಆರ್ಬಿಟ್ ಸಂಸ್ಥೆಯಲ್ಲಿ ಪಾಲಕಿ ಸಂತ ಮದರ್ ತೆರೆಸಾರವರ ಸ್ಮರಣಾರ್ಥವಾಗಿ ಬುಧವಾರ ಆರ್ಬಿಟ್ ಸಂಸ್ಥೆ ಹಾಗೂ ಐಸಿಐವೈಎಂ ಗುಲ್ಬರ್ಗ ಧರ್ಮಕ್ಷೇತ್ರದ ಸಂಯುಕ್ತ ಆಶ್ರಯದಲ್ಲಿ ರಕ್ತದಾನ ಶಿಬಿರವನ್ನು ನಡೆಯಿತು.

ಫಾದರ ಸಂತೋಷ್ ಬಾಪು ಮಾತನಾಡಿ, ರಕ್ತದಾನ ಮಾಡುವುದು ಮಾನವ ಜೀವನದಲ್ಲಿ ಸಿಗುವ ಶ್ರೇಷ್ಠ ಅವಕಾಶ. ಪ್ರತಿಯೊಬ್ಬರೂ ಮತ್ತೊಬ್ಬರ ಜೀವ ಉಳಿಸಲು ರಕ್ತದಾನಕ್ಕೆ ಮುಂದೆ ಬರಬೇಕು ಎಂದು ತಿಳಿಸಿದರು.

ತಾಲೂಕ ವೈದ್ಯಾಧಿಕಾರಿ ಡಾ.ಶಿವಕುಮಾರ ಸಿದ್ದೇಶ್ವರ ಮಾತನಾಡಿ,ಆರ್ಬಿಟ್ ಸಂಸ್ಥೆ ಹಲವು ವರ್ಷಗಳಿಂದ ಸಮಾಜ ಸೇವೆ ಆರೋಗ್ಯ ಇಲಾಖೆಯೊಂದಿಗೆ ಕೈಜೋಡಿಸಿ ಜನಜಾಗೃತಿ ಹಾಗೂ ಸೇವಾ ಚಟುವಟಿಕೆಗಳನ್ನು ಯಶಸ್ವಿಯಾಗಿ ನಡೆಸುತ್ತಿದೆ ಎಂದು ಬಣ್ಣಿಸಿದರು.

ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಾದರ ವಿಕ್ಟರ ವಾಸ ಮಾತನಾಡಿ, ದಾನಗಳಲ್ಲಿ ಶ್ರೇಷ್ಠ ದಾನವೆಂದರೆ ರಕ್ತದಾನ. ತುರ್ತು ಪರಿಸ್ಥಿತಿಯಲ್ಲಿ ಅನೇಕರ ಜೀವ ಉಳಿಸಲು ಬಹಳ ಉಪಯುಕ್ತ, ರಕ್ತದಾನ ಮಾಡುವ ಮೂಲಕ ಇತರರ ಜೀವ ಉಳಿಸುವುದರ ಜೊತೆಗೆ ದಾನಿಗಳಿಗೆ ಆರೋಗ್ಯಕರ ಪ್ರಯೋಜನವೂ ಲಭಿಸುತ್ತದೆ.ಸುಮಾರು ೭೫ ಮಂದಿ ರಕ್ತದಾನ ಮಾಡಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬ್ರಿಮ್ಸ್ ಆಸ್ಪತ್ರೆಯ ರಕ್ತನಿಧಿ ಘಟಕದ ಡಾ.ಮಲ್ಲಣ್ಣ ಗೌಡ ಪಾಟೀಲ್,ಫಾದರ ಸ್ಟಾನಿ ಲೋಬೊ,ಫಾದರ ಆಲ್ಬರ್ಟ,ಎಎಸ್ಐ ಅಶೋಕ, ಐಸಿಐವೈಎಂ ನಿರ್ದೇಶಕ ಫಾದರ ಸಚಿನ್, ಉಪನ್ಯಾಸಕಿ ಸಂತೋಷಿ ಹಾಗೂ ವಿದ್ಯಾರ್ಥಿ ವೃಂದ, ಸಿಸ್ಟರ್ ಲೀರಾ,ಫಾದರ ಜಾರ್ಜ, ಫಾದರ ರಾಬರ್ಟ, ಫಾದರ ವಿನಯ,ಫಾದರ ಆರೋನ್,ಫಾದರ ಕ್ಲ್ಯಾರಿ,ಸಿಸ್ಟರ್ ಪ್ರೀತಿ, ಸಿಸ್ಟರ್ ಶೀಲಾ ಆರ್ಬಿಟ್ ಸಿಬ್ಬಂದಿ ವರ್ಗ ಹಾಜರಿದ್ದರು.

# ರಕ್ತದಾನದಿಂದ ಉತ್ತಮ ಆರೋಗ್ಯ: ಟಿಎಚ್‌ಒ

ಪ್ರಜಾವಾಣಿ ವಾರ್ತೆ



ಹುಮನಾಬಾದ್ ಪಟ್ಟಣದ ಹೊರವಲಯದ ಆರ್ಬಿಟ್ ಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರ ಕಾರ್ಯಕ್ರಮದಲ್ಲಿ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಶಿವಕುಮಾರ ಸಿದ್ಧೇಶ್ವರ ಮಾತನಾಡಿದರು

ಹುಮನಾಬಾದ್: ‘ರಕ್ತದಾನ ಮಾಡುವುದರಿಂದ ದೇಹದಲ್ಲಿ ಹೊಸ ರಕ್ತ ಉತ್ಪತ್ತಿಯಾಗುವುದರ ಜತೆ ದೇಹವು ಸದೃಢವಾಗಿ ಇರುತ್ತದೆ’ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಶಿವಕುಮಾರ ಸಿದ್ಧೇಶ್ವರ ತಿಳಿಸಿದರು.

ಪಟ್ಟಣದ ಹೊರವಲಯದ ಆರ್ಬಿಟ್ ಸಂಸ್ಥೆಯಲ್ಲಿ ಮದರ್ ತೆರೇಸಾ ಅವರ ಸ್ಮರಣಾರ್ಥ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

3 ತಿಂಗಳಿಗೆ ಒಮ್ಮೆ ರಕ್ತದಾನ ಮಾಡಬಹುದು. ರಕ್ತದಾನದಿಂದ ಕೊಬ್ಬಿನ ಅಂಶ ಕಮ್ಮಿಯಾಗುತ್ತದೆ. ಹೃದಯಾಘಾತದ ಸಾಧ್ಯತೆ ಕಮ್ಮಿಯಾಗುತ್ತದೆ ಎಂದು ಹೇಳಿದರು.

ಆರ್ಬಿಟ್ ಸಂಸ್ಥೆಯ ನಿರ್ದೇಶಕ ಫಾದರ್ ವಿಕ್ಟರ್ ವಾಸ್ ಮಾತನಾಡಿ, ‘ಒಟ್ಟು 75 ಜನರಿಂದ ರಕ್ತದಾನ ಮಾಡಿಸಲಾಗುತ್ತಿದೆ’ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಂತೋಷ, ಡಾ.ಮಲ್ಲಣ್ಣಗೌಡ ಪಾಟೀಲ, ಸ್ಟಾನಿ ಲೋಬೊ, ಅಲ್ಬರ್ಟ್, ಎಎಸ್ಐ ಅಶೋಕ, ಸಚಿನ್, ಸಂತೋಷಿ, ಲೀರಾ, ಜಾರ್ಜ್, ರಾಬರ್ಟ್, ವಿನಯ, ಆರೋನ್, ಕ್ಲ್ಯಾರಿ, ಪ್ರೀತಿ, ಶೀಲಾ ಸೇರಿದಂತೆ ಇತರರು ಇದ್ದರು.

ಪ್ರಜಾ ವಾಹಿನಿ
ಜನ ದನಿ
PRAJAVAHINI 2025-page-004
14 Aug 2025

# ಉಚಿತ ಕ್ಯಾನ್ಸರ್ ಮತ್ತು ನೇತ್ರ ತಪಾಸಣೆ



• ಪ್ರಜಾವಾಹಿನಿ–ಭಾಲ್ಕಿ

ತಾಲೂಕಿನ ದಾಡಗಿ ಗ್ರಾಮದ ವಿದ್ಯಾಭಾರತಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಕ್ಯಾನ್ಸರ್ ಮತ್ತು ನೇತ್ರ ತಪಾಸಣೆ ಶಿಬಿರ ನಡೆಯಿತು.

ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತೆ ಸುಜಾತಾರವರು ಪ್ರಾರ್ಥನಾ ಗೀತೆಯೊಂದಿಗೆ ಶಿಬಿರಕ್ಕೆ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ಸುಮಾರು 33 ವರ್ಷಗಳಿಂದ ಆರ್ಬಿಟ್ ಸಂಸ್ಥೆಯು ಸಮಾಜ ಸೇವೆಯನ್ನು ಮಾಡುತ್ತಾ ಬಂದಿದೆ. ಮಾನಸಿಕ ಅಸ್ವಸ್ಥತೆ ಮತ್ತು ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಮತ್ತು ಮಹಿಳೆಯರ ಸಬಲೀಕರಣ ಮತ್ತು ಸಮಾಜ ಸೇವೆಯಲ್ಲಿ ತೊಡಗಿ ಅವರ ಜೀವನ ಮಟ್ಟವನ್ನು ಸುಧಾರಿಸುವಲ್ಲಿ ಹಾಗು ಸರ್ಕಾರದ ಸವಲತ್ತುಗಳನ್ನು ಸಮಾಜದ ಜನರಿಗೆ ಒದಗಿಸುವಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಇತ್ತೀಚಿನ ದಿನಗಳಲ್ಲಿ ಕ್ಯಾನ್ಸರ್ ಎನ್ನುವ ಮಾಹಾ ರೋಗವು ಜನರಲ್ಲಿ ಕಂಡು ಬರುತ್ತಿದೆ. ಅನೇಕ ಜನರು ಕ್ಯಾನ್ಸರ್ ರೋಗವನ್ನು ತಿಳಿಯಲಾರದೇ ತುತ್ತಾಗುತ್ತಿದ್ದಾರೆ. ಅದಕ್ಕಾಗಿಯೇ ಈ ಶಿಬಿರವನ್ನು ಆಯೋಜಿಸಲಾಗಿದೆ. ಸಾರ್ವಜನಿರು ಶಿಬಿರದ ಸದುಪಯೋಗ ಪಡೆದುಕೊಳ್ಳಿ ಎಂದು ಹೇಳಿದರು.

ಸಂಸ್ಥೆಯ ಸಂಯೋಜಕ ಯೋಹಾನ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಇಂಡಿಯನ್ನ ಕ್ಯಾನ್ಸರ್ ಸೊಸೈಟಿಯ ಜಿಲ್ಲಾ ಸಂಯೋಜಕ ಗುರುರಾಜ ಕುಲಕರ್ಣಿಯವರು ಮಾತನಾಡಿ, ಕ್ಯಾನ್ಸರ್ ಲಕ್ಷಣಗಳ ಬಗ್ಗೆ ಮತ್ತು ಆದರಿಂದಾಗುವ ದುರುಪಯೋಗಗಳ ಬಗ್ಗೆ ತಿಳುವಳಿಕೆ ನೀಡಿದರು. ಇದೇ ವೇಳೆ ಗ್ರಾಮದ ಸುಮಾರು 60 ಜನರು ಕ್ಯಾನ್ಸರ್ ತಪಾಸಣೆ ಮತ್ತು 24 ಜನರು ನೇತ್ರ ತಪಾಸಣೆ ಮಾಡಿಸಿಕೊಂಡರು. ಮಹಿಳಾ ಸಬಲೀಕರಣ ಕಾರ್ಯಕರ್ತ ಪ್ರಭು ವಂದಿಸಿದರು.

# ಆರ್ಬಿಟ್ ಸಂಸ್ಥೆಯಲ್ಲಿ ರಕ್ತದಾನ ಶಿಬಿರ




• ದಿ ಡೈಲಿ ನ್ಯೂಸ್ ಹುಮನಾಬಾದ

ಪಟ್ಟಣದ ಹೊರವಲಯದಲ್ಲಿರುವ ಆರ್ಬಿಟ್ ಸಂಸ್ಥೆಯಲ್ಲಿ ಪಾಲಕಿ ಸಂತ ಮದರ್ ತೆರೆಸಾರವರ ಸ್ಮರಣಾರ್ಥವಾಗಿ ಬುಧವಾರ ಆರ್ಬಿಟ್ ಸಂಸ್ಥೆ ಹಾಗೂ ಐಸಿಐವೈಎಂ ಗುಲ್ಬರ್ಗ ಧರ್ಮಕ್ಷೇತ್ರದ ಸಂಯುಕ್ತ ಆಶ್ರಯದಲ್ಲಿ ರಕ್ತದಾನ ಶಿಬಿರವನ್ನು ನಡೆಯಿತು.

ಫಾದರ ಸಂತೋಷ್ ಬಾಪು ಮಾತನಾಡಿ, ರಕ್ತದಾನ ಮಾಡುವುದು ಮಾನವ ಜೀವನದಲ್ಲಿ ಸಿಗುವ ಶ್ರೇಷ್ಠ ಅವಕಾಶ. ಪ್ರತಿಯೊಬ್ಬರೂ ಮತ್ತೊಬ್ಬರ ಜೀವ ಉಳಿಸಲು ರಕ್ತದಾನಕ್ಕೆ ಮುಂದೆ ಬರಬೇಕು ಎಂದು ತಿಳಿಸಿದರು. ತಾಲೂಕ ವೈದ್ಯಾಧಿಕಾರಿ ಡಾ.ಶಿವಕುಮಾರ ಸಿದ್ದೇಶ್ವರ ಮಾತನಾಡಿ,ಆರ್ಬಿಟ್ ಸಂಸ್ಥೆ ಹಲವು ವರ್ಷಗಳಿಂದ ಸಮಾಜ ಸೇವೆ ಆರೋಗ್ಯ ಇಲಾಖೆಯೊಂದಿಗೆ ಕೈಜೋಡಿಸಿ ಜನಜಾಗೃತಿ ಹಾಗೂ ಸೇವಾ ಚಟುವಟಿಕೆಗಳನ್ನು ಯಶಸ್ವಿಯಾಗಿ ನಡೆಸುತ್ತಿದೆ ಎಂದು ಬಣ್ಣಿಸಿದರು. ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಾದರ ವಿಕ್ಟರ ವಾಸ ಮಾತನಾಡಿ,ದಾನಗಳಲ್ಲಿ ಶ್ರೇಷ್ಠ ದಾನವೆಂದರೆ ರಕ್ತದಾನ.ತುರ್ತು ಪರಿಸ್ಥಿತಿಯಲ್ಲಿ ಅನೇಕರ ಜೀವ ಉಳಿಸಲು ಬಹಳ ಉಪಯುಕ್ತ.ರಕ್ತದಾನ ಮಾಡುವ ಮೂಲಕ ಇತರರ ಜೀವ ಉಳಿಸುವುದರ ಜೊತೆಗೆ ದಾನಿಗಳಿಗೆ ಆರೋಗ್ಯಕರ ಪ್ರಯೋಜನವೂ ಲಭಿಸುತ್ತದೆ.ಸುಮಾರು 75 ಮಂದಿ ರಕ್ತದಾನ ಮಾಡಿದ್ದಾರೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಬ್ರಿಮ್ಸ್ ಆಸ್ಪತ್ರೆಯ ರಕ್ತನಿಧಿ ಘಟಕದ ಡಾ.ಮಲ್ಲಣ್ಣ ಗೌಡ ಪಾಟೀಲ್,ಫಾದರ ಸ್ಟಾನಿ ಲೋಬೊ,ಫಾದರ ಆಲ್ಬರ್ಟ್,ಎಎಸ್ಐ ಅಶೋಕ, ಐಸಿಐವೈಎಂ ನಿರ್ದೇಶಕ ಫಾದರ ಸಚಿನ್,ಉಪನ್ಯಾಸಕಿ ಸಂತೋಷಿ ಹಾಗೂ ವಿದ್ಯಾರ್ಥಿ ವೃಂದ, ಸಿಸ್ಟರ್ ಲೀರಾ,ಫಾದರ ಜಾರ್ಜ್,ಫಾದರ ರಾಬರ್ಟ್,ಫಾದರ ವಿನಯ,ಫಾದರ ಆರೋನ್,ಫಾದರ ಕ್ಲ್ಯಾರಿ,ಸಿಸ್ಟರ್ ಪ್ರೀತಿ, ಸಿಸ್ಟರ್ ಶೀಲಾ ಆರ್ಬಿಟ್ ಸಿಬ್ಬಂದಿ ವರ್ಗ ಹಾಜರಿದ್ದರು.

# ಆರ್ಬಿಟ್ ಸಂಸ್ಥೆಯಿಂದ ಉಚಿತ ಕ್ಯಾನ್ಸರ್ ಮತ್ತು ನೇತ್ರ ತಪಾಸಣೆ




• ದಿ ಡೈಲಿ ನ್ಯೂಸ್ ಭಾಲ್ಕಿ

ತಾಲೂಕಿನ ದಾಡಗಿ ಗ್ರಾಮದ ವಿದ್ಯಾಭಾರತಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಕ್ಯಾನ್ಸರ್ ಮತ್ತು ನೇತ್ರ ತಪಾಸಣೆ ಶಿಬಿರ ನಡೆಯಿತು.

ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತೆ ಸುಜಾತಾ ರವರು ಪ್ರಾರ್ಥನಾ ಗೀತೆಯೊಂದಿಗೆ ಶಿಬಿರಕ್ಕೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಸುಮಾರು 33 ವರ್ಷಗಳಿಂದ ಆರ್ಬಿಟ್ ಸಂಸ್ಥೆಯು ಸಮಾಜ ಸೇವೆಯನ್ನು ಮಾಡುತ್ತಾ ಬಂದಿದೆ. ಮಾನಸಿಕ ಅಸ್ವಸ್ಥತೆ ಮತ್ತು ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಮತ್ತು ಮಹಿಳೆಯರ ಸಬಲೀಕರಣ ಮತ್ತು ಸಮಾಜ ಸೇವೆಯಲ್ಲಿ ತೊಡಗಿ ಅವರ ಜೀವನ ಮಟ್ಟವನ್ನು ಸುಧಾರಿಸುವಲ್ಲಿ ಹಾಗು ಸರ್ಕಾರದ ಸವಲತ್ತುಗಳನ್ನು ಸಮಾಜದ ಜನರಿಗೆ ಒದಗಿಸುವಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಇತ್ತೀಚಿನ ದಿನಗಳಲ್ಲಿ ಕ್ಯಾನ್ಸರ್ ಎನ್ನುವ ಮಾಹಾ ರೋಗವು ಜನರಲ್ಲಿ ಕಂಡು ಬರುತ್ತಿದೆ. ಅನೇಕ ಜನರು ಕ್ಯಾನ್ಸರ್ ರೋಗವನ್ನು ತಿಳಿಯಲಾರದೇ ತುತ್ತಾಗುತ್ತಿದ್ದಾರೆ. ಅದಕ್ಕಾಗಿಯೇ ಈ ಶಿಬಿರವನ್ನು ಆಯೋಜಿಸಲಾಗಿದೆ. ಸಾರ್ವಜನಿರು ಶಿಬಿರದ ಸದುಪಯೋಗ ಪಡೆದುಕೊಳ್ಳಿ ಎಂದು ಹೇಳಿದರು.

ಸಂಸ್ಥೆಯ ಸಂಯೋಜಕ ಯೋಹಾನ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಇಂಡಿಯನ್ನ ಕ್ಯಾನ್ಸರ್ ಸುಸೈಟಿಯ ಜಿಲ್ಲಾ ಸಂಯೋಜಕ ಗುರುರಾಜ ಕುಲಕರ್ಣಿಯವರು ಮಾತನಾಡಿ, ಕ್ಯಾನ್ಸರ್ ಲಕ್ಷಣಗಳ ಬಗ್ಗೆ ಮತ್ತು ಆದರಿಂದಾಗುವ ದುರುಪಯೋಗಗಳ ಬಗ್ಗೆ ತಿಳುವಳಿಕೆ ನೀಡಿದರು. ಇದೇವೇಳೆ ಗ್ರಾಮದ ಸುಮಾರು 60 ಜನರು ಕ್ಯಾನ್ಸರ್ ತಪಾಸಣೆ ಮತ್ತು 24 ಜನರು ನೇತ್ರ ತಪಾಸಣೆ ಮಾಡಿಸಿಕೊಂಡರು. ಮಹಿಳಾ ಸಬಲೀಕರಣ ಕಾರ್ಯಕರ್ತ ಪ್ರಭು ವಂದಿಸಿದರು.

# ORBIT NGO

Non-Governmental Organization
Humnabad, Karnataka

Organization of Bidar Integral Transformation

## Scan this QR Code

# TO DONATE

www.orbitbidar.in

# SEVA SANGAMA

Organization for Social Concern Development

## Scan this QR Code

## TO DONATE

www.sevasangama.in

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ (NGO)
# ಗುಲ್ಬರ್ಗಾ ಧರ್ಮಕ್ಷೇತ್ರ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ 1993 ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ 2005ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುರ್ನವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಪೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೇವೆ.

ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.



**TO DONATE, SCAN THE QR CODE**

ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೇಂಟರ್
ಪ್ರತಿ ತಿಂಗಳು 4000/- ವರ್ಷಕ್ಕೆ 40,000/-

ಪ್ರಾಯೋಜಕರು ಒಂದು ಮಗು
ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/-

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN number ಕೆಳಗಿರುವ ಸಂಖ್ಯೆಗೆ WhatsApp ಮಾಡುವುದು.

**(Only for Indian Citizens)**

**Bank Account Details**

Name : Sevasangama Development Society
Account No : 16040100022902
IFSC Code : FDRL0001604
Bank : Federal Bank
Branch : Super Market Kalaburagi

Fr. Victor Anil Vas
Director, Seva Sangama & ORBIT


Address

Seva Sangama Development Society, Near Kendriya Vidyalaya, Kotnoor D, Kalaburagi, Karnataka-585102
Contact: 8660968063 / 9743112739 - Email: sevasangama2006@gmail.com / Website: www.sevasangama.in